

ಕಲ್ಯಾಣ ಕಿರಣ

ಬೆಲೆ: ರೂ.6/- ಸೆಪ್ಟೆಂಬರ್-2006





ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶ ಮಾಡಲು ಪ್ರಯತ್ನಿಸುವಾಗ ಶರಣರು ಅದನ್ನು ರಕ್ಷಿಸಲಿಕ್ಕೆ ಕಲ್ಯಾಣದಿಂದ ಹೊರಕ್ಕೆ ಒಯ್ಯಲು ಯತ್ನಿಸುತ್ತಿರುವ ಚಿತ್ರ.

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-37 ಬಸವ ಶಕೆ-873 ಆಜೀವ ಸದಸ್ಯತ್ವ 600 ರೂ.

ಸಂಚಿಕೆ-6 ಸೆಪ್ಟಂಬರ್-2006 ವಾರ್ಷಿಕ ಚಂದಾ 60/- ರೂ.

ಗುರು ವಂದನೆ



ಬಸವ ಗಣ ಪೂಜಿತ ಶ್ರೀ ಅಪ್ಪಾಜಿ
ಮನುಗೂಳಿ ಮಹಾಯೋಗಿ ಶ್ರೀ ಅಪ್ಪಾಜಿ
ಕಾಷಾಯ ಭೂಷಣ ಶ್ರೀ ಅಪ್ಪಾಜಿ
ಶರಣೆಂಬೆ ನಾ ಓಂ ಗುರು ದೇವ. ಶರಣು - ಶರಣಾರ್ಥಿ

ಜ್ಞಾನ ವಾಹಿನಿ ಶ್ರೀ ಅಪ್ಪಾಜಿ
ಪ್ರವಚನ ಯೋಗಿ ಶ್ರೀ ಅಪ್ಪಾಜಿ
ಕ್ರಾಂತಿ ಪುರುಷ ಶ್ರೀ ಅಪ್ಪಾಜಿ
ಶರಣೆಂಬೆ ನಾ ಓಂ ಗುರು ದೇವ. ಶರಣು - ಶರಣಾರ್ಥಿ

ವಚನ ಪರಿಣಿತ ಶ್ರೀ ಅಪ್ಪಾಜಿ
ಸತ್ವದ ಶೋಧಕ ಶ್ರೀ ಅಪ್ಪಾಜಿ
ದೇವೋಪಾಸಕ ಶ್ರೀ ಅಪ್ಪಾಜಿ
ಶರಣೆಂಬೆ ನಾ ಓಂ ಗುರು ದೇವ. ಶರಣು - ಶರಣಾರ್ಥಿ

ರಾಷ್ಟ್ರ ಪ್ರೇಮಿ ಶ್ರೀ ಅಪ್ಪಾಜಿ
ಬಸವ ದಳ ಸ್ಥಾಪಕ ಶ್ರೀ ಅಪ್ಪಾಜಿ
ಬಸವ ಧರ್ಮೋದ್ಧಾರಕ ಶ್ರೀ ಅಪ್ಪಾಜಿ
ಶರಣೆಂಬೆ ನಾ ಓಂ ಗುರು ದೇವ. ಶರಣು - ಶರಣಾರ್ಥಿ

ಬಸವ ಧರ್ಮ ಬೋಧಕ ಶ್ರೀ ಅಪ್ಪಾಜಿ
ಪ್ರವಚನ ಪಿತಾಮಹ ಶ್ರೀ ಅಪ್ಪಾಜಿ
ಬಸವ ಯುಗ ನಿರ್ಮಾಪಕ ಶ್ರೀ ಅಪ್ಪಾಜಿ
ಶರಣೆಂಬೆ ನಾ ಓಂ ಗುರುದೇವ. ಶರಣು - ಶರಣಾರ್ಥಿ

ಜಾತಿ ವಿರೋಧಿ ಶ್ರೀ ಅಪ್ಪಾಜಿ
ಜಂಗಮ ಪ್ರೇಮಿ ಶ್ರೀ ಅಪ್ಪಾಜಿ
ಭ್ರಾಂತಿ ನಿವಾರಕ ಶ್ರೀ ಅಪ್ಪಾಜಿ
ಶರಣೆಂಬೆ ನಾ ಓಂ / ಗುರುದೇವ. ಶರಣು - ಶರಣಾರ್ಥಿ

ಅನುಭವ ಜ್ಞಾನಿ ಶ್ರೀ ಅಪ್ಪಾಜಿ
ಅರಿವಿನ ವಾರಿಧಿ ಶ್ರೀ ಅಪ್ಪಾಜಿ
ಅಧಿಕಾರ ನಿರ್ಮೋಹಿ ಶ್ರೀ ಅಪ್ಪಾಜಿ
ಶರಣೆಂಬೆ ನಾ ಓಂ ಗುರುದೇವ. ಶರಣು - ಶರಣಾರ್ಥಿ

ಸಾಧಕ ಪ್ರಿಯ ಶ್ರೀ ಅಪ್ಪಾಜಿ
ಸ್ತ್ರೀ ಪೀಠ ಸ್ಥಾಪಕ ಶ್ರೀ ಅಪ್ಪಾಜಿ
ಮಂಗಳರೂಪಿ ಶ್ರೀ ಅಪ್ಪಾಜಿ
ನೆನೆಯುವೆ ನಾ ಓಂ ಗುರುದೇವ ಶರಣು - ಶರಣಾರ್ಥಿ

- ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ 37 ಬಸವ ಶಕೆ 873 ಆಜೀವ ಸದಸ್ಯತ್ವ 600ರೂ
ಸಂಚಿಕೆ 6 ಸೆಪ್ಟಂಬರ್- 2006 ವಾರ್ಷಿಕ ಚಂದಾ 60/-ರೂ.

ಕಿರಣ ಗನ್ನಡಿ



ಶಿವ(ಸೋಮ)ವಾರ, ದಿ.2-10-2006ರಂದು
ವೀರ ಮಾತೆ ಅಕ್ಕನಾಗಲಾಂಬಿಕಾ ತಾಯಿಯ
ಸಂಸ್ಮರಣೆ



ಶಿವ(ಸೋಮ)ವಾರ, ದಿ.2-10-2006ರಂದು
ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳ
47 ನೆಯ ವರ್ಧಂತಿ

KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಂಪಾದಕೀಯ :

ಯಾರು ಮನೋರೋಗಿಗಳು ?

\- ಮಾತಾಜಿ

ಒಂದು ದಿವಸ ಬೆಳಿಗ್ಗೆ 9 ಗಂಟೆಗೆ ತಮ್ಮ ಮಗನೊಡನೆ ಅವರ ತಾಯಿ ತಂದೆ ಬಂಧುಗಳು ದೂರದ ಊರಿನಿಂದ ಧಾವಿಸಿ ಬಂದು ಗಾಬರಿಯಿಂದ ಆತನನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕೆಂದು ತಿಳಿಸಿದರು. ಆತ ನಮಗೆ ಪೂರ್ವ ಪರಿಚಿತನೆ. ಜೀವನದಲ್ಲಿ ಬಹಳಷ್ಟು ಆದರ್ಶಗಳನ್ನೂ ಇಟ್ಟುಕೊಂಡವರು. ಇಲ್ಲಿ ಹತ್ತಿರದಲ್ಲೇ ಒಂದು ಮನೋರೋಗಿಗಳ ಚಿಕಿತ್ಸಾಲಯವಿದೆ. ವಿಳಾಸ ಕೊಡುತ್ತೇವೆ ಹೋಗಿರಿ ಎಂದೆ.ಆಗ ಆತ, "ಚಿಕಿತ್ಸೆ ಬೇಕಾಗಿರುವುದು ನನಗಲ್ಲ ಇವರಿಗೆ ; ಇವರನ್ನು ಮೊದಲು ಸೇರಿಸಿರಿ." ಎಂದು ತಾಯಿ -ತಂದೆಯರ ಕಡೆಗೆ ಕೈ ಮಾಡಿದ. ನನಗೆ ಬಹಳ ನಗು ಬಂದಿತು. ಹೋಗಲಿ, ಅವರ ಸಮಾಧಾನಕ್ಕೆ ತೋರಿಸಿಕೊ ಎಂದೆ. "ಇಲ್ಲ, ಅವರು ಅನವಶ್ಯಕವಾಗಿ ಗುಳಿಗೆ ಕೊಡುತ್ತಾರೆ. ಅವನ್ನು ನುಂಗಿ ಮಂಕಾಗಿ ಕುಳಿತು ಕೊಳ್ಳಲು ನನಗೆ ಇಷ್ಟವಿಲ್ಲ" ಎಂದ. ಇರಲಿ, ತೋರಿಸಿಕೊ.ಗುಳಿಗೆ ಚೀಟಿ ಕೊಟ್ಟರೆ ಪಡೆದುಕೋ ಸದ್ಯ ತಿನ್ನುವುದು ಬೇಡ." ಎಂದೆಲ್ಲ ಹೇಳಿ ಕಳಿಸಿಕೊಟ್ಟೆವು ಚಿಕಿತ್ಸಾಲಯಕ್ಕೆ.

ಅಂದೇ ಮಧ್ಯಾಹ್ನ ಇನ್ನು ಒಬ್ಬ ಹುಡುಗಿಯನ್ನು ಕರೆದು ಕೊಂಡು ತಾಯಿ ತಂದೆ ಅವರ ತಾತ ಬಂದರು. ಆಕೆಯನ್ನು ಮನೋರೋಗಿಗಳ ಚಿಕಿತ್ಸಾಲಯಕ್ಕೆ ಸೇರಿಸ ಬೇಕೆಂದು ಅವರ ಅಪೇಕ್ಷೆ. 'ಆಕೆ ನನಗೇನಾಗಿದೆ ?' ಏಕೆ ಸೇರಿಸಬೇಕು ? ಎಂದು ಅವಳ ತಕರಾರು. ಸರಿ, ಈಕೆ ಏನು ಮಾಡುತ್ತಾಳೆ ? ಎಂದು ವಿವರಣೆ ಕೇಳಿದೆ.

1. "ರಾತ್ರಿ 2ಘಂಟೆ ತನಕ ಓದುತ್ತಾಳೆ ನಿದ್ದೆ ಕಟ್ಟಿ ಆರೋಗ್ಯ ಕೆಡಿಸಿಕೊಳ್ಳಬೇಡ ಎಂದರೆ ಕೇಳುವುದಿಲ್ಲ. ಆ ಹುಡುಗಿ ಹೇಳಿದಳು, "ನನಗೆ ತುಂಬಾ ಪುಸ್ತಕ ಓದಬೇಕು ಎಂದು ಇಷ್ಟ ನನಗೆ ಆರೋಗ್ಯ ಚನ್ನಾಗಿದೆ. ಇವರು ಓದಬೇಡ ಎಂದು ಸುಮ್ಮನೆ ಕಿರಿಕಿರಿ ಮಾಡುತ್ತಾರೆ."
2. ತುಂಬಾ ಮಾತನಾಡುತ್ತಾಳೆ. ಬಹಳ ವಚನಗಳನ್ನು ಓದುತ್ತಾಳೆ. ಬೇರೆಯವರಿಗೆ ಹೇಳ ಹೋಗುತ್ತಾಳೆ. ಒಂದು ಕಡೆ ಗಣಾರಾಧನೆ ಇತ್ತು; ಊಟಕ್ಕೆ ಮೊದಲು ವಚನ ಹೇಳ್ರಿ ಎಂದಳು. ನಮ್ಮ ಬಂಧುಗಳು ಬೇಜಾರು ಮಾಡಿಕೊಂಡರು.
3. ಇಲ್ಲವೇ ಯಾರಾದರೂ ಏನಾದರೂ ಅಂದರೆ ಮಂಕಾಗಿ ಕುಳಿತುಕೊಳ್ಳುತ್ತಾಳೆ. ನಿನ್ನೆ ನಮ್ಮ ಬಂಧುಗಳ ಪೈಕಿ ಹುಡುಗನೊಬ್ಬ ಮತ್ತು ಅವನ ಮಿತ್ರ ಭೀಕರ ಅಪಘಾತದಲ್ಲಿ ಸತ್ತರು. ಆಗ ಈಕೆ ಹೋಗಿ ವಿಭೂತಿ ಧರಿಸಿದಳು. ಆಗ ಕೆಲವರು ನಿನಗೇಕೆ ಬೇಕಾಗಿತ್ತು ಎಂದು ಬೈದರು. ಅದಕ್ಕೇ ಮನಸ್ಸಿಗೆ ಬೇಜಾರು ಪಟ್ಟುಕೊಂಡಳು.
4. ನಮ್ಮ ಮನೇಲಿ ಎಲ್ಲರೂ ಬೆಳಿಗ್ಗೆ ಇಷ್ಟಲಿಂಗ ಪೂಜೆ ಮಾಡಿಕೊಳ್ಳುತ್ತೇವೆ. ನಂತರ ಈಕೆ ಬಸವಣ್ಣನವರ ಪೂಜೆ ಮಾಡುತ್ತಾಳೆ; ನಾವೂ ಮಾಡುತ್ತೇವೆ. ಆದರೆ ಲಕ್ಷ್ಮೀ, ಗಣಪತಿ ಮುಂತಾದ ಪೂಜೆ ಮಾಡಬಾರದು ಎನ್ನುತ್ತಾಳೆ. ಮೊದಲಿನಿಂದ ಬಂದುದನ್ನು ಬಿಡಬಾರದು ಎನ್ನುತ್ತೇವೆ.
5. ಏಕೆ ಹೀಗೆ ಮಾಡ್ತಾಳೆ ಎಂದು ಜ್ಯೋತಿಷಿಗಳನ್ನು ಕೇಳಿದ್ದಕ್ಕೆ "ನಿಮ್ಮ ಮನೆಯಲ್ಲಿ ಮೃತ್ಯುಂಜಯ ಹೋಮ ಮಾಡಿರಿ, ವಾಸಿಯಾಗುತ್ತದೆ ?" ಎಂದಿದ್ದಾರೆ; ಮಾಡಿಸಬೇಕೆಂದಿದ್ದೇವೆ.

ಈ ಎರಡೂ ಪ್ರಸಂಗಗಳನ್ನು ವಿಶ್ಲೇಷಿಸಿದಾಗ "ಲಿಂಗಾಯತ ಸಮಾಜ ಎಷ್ಟು ಕೆಟ್ಟುಹೋಗಿದೆ. ಎಂಥಾ ಅಜ್ಞಾನದ ಕಾರ್ಮೋಡ ಇದಕ್ಕೆ ಮುಸುಗಿದೆ" ಎಂದು ತೀವ್ರವಾಗಿ ದುಃಖವಾಗುವುದು.

ಮೊದಲನೆಯ ಪ್ರಸಂಗದಲ್ಲಿ, "ಮೊದಲು ಚೆನ್ನಾಗಿದ್ದ; ಬಸವಣ್ಣಪ್ಪನ ತತ್ತ್ವಕ್ಕೆ ಬಂದ ಮೇಲೆ ಹೀಗಾದ." ಎಂದು ತಾಯಿಯು ಹೇಳಿದಳು. ಇದಕ್ಕೆ ವಿವರಣೆ ಕೇಳಿದಾಗ, "ಇವರು ಯಾವಾಗಲೂ ಮದ್ದು ಮಾಟ, ತಾಯಿತ ಯಂತ್ರ ಎಂದು ಓಡಾಡುತ್ತಾರೆ. ನನಗೇನೂ ಆಗಿಲ್ಲ ಎಂದು ಹೇಳಲು ಹೋದರೆ

ಜಾಸ್ತಿ ಮಾತಾಡುತ್ತಾನೆ ಎಂದು ಒಮ್ಮೆ ಧಾರವಾಡದ ಹುಚ್ಚಾಸ್ಪತ್ರೆಗೆ ಸೇರಿಸಿದ್ದರು. ನಾನು ಹೇಳುವ ವಿಚಾರಗಳನ್ನು ಅರ್ಥ ಮಾಡಿಕೊಳುವುದಿಲ್ಲ."

ವಚನ ಸಾಹಿತ್ಯ ಗಂಧ ಗಾಳಿಯೂ ತೀಡಿರದ ಜನರು; ಅವರಿಗೆ, "ನಮ್ಮ ಧರ್ಮ ಹೀಗಿದೆ. ಇಂಥ ಮೂಢ ನಂಬಿಕೆ ಬೇಡ." ಎಂದು ವಚನಗಳನ್ನು ಹೇಳಹೋದರೆ ಹೇಳುವವರು ಹುಚ್ಚರಂತೆ ತೋರುತ್ತಾರೆ. ಅಕ್ಕಮಹಾದೇವಿ ತಾಯಿ ಹೇಳುವಂತೆ, "ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ ಮರುಳಾಗಿ ತೋರುವುದು." (ಅ.ವ.308) ಆ ತರುಣ ಬಹಳ ಆದರ್ಶವಾದಿ. ಅನಾಥರಿಗೆ ನೆರವಾಗಬೇಕು; ಗ್ರಾಮಾಂತರ ಪ್ರದೇಶಗಳ ಬೆಳವಣಿಗೆಗೆ ಯೋಜನೆ ರೂಪಿಸಬೇಕು. ಎಂದು ಹಲವಾರು ಕನಸನ್ನು ಹೊತ್ತ ವೃತ್ತಿಯಿಂದ ಶಿಕ್ಷಕ. ಇದು ಮನೆಯವರಿಗೆ ಸುತ್ತಲಿನವರಿಗೆ ಬಹಳ ವಿಚಿತ್ರವಾಗಿ ತೋರುತ್ತದೆ. ಮದುವೆ, ಸಂಸಾರ, ಮಕ್ಕಳು, ಉದ್ಯೋಗ, ಹಣ, ಮನೆ, ಆಸ್ತಿ - ಇವುಗಳಲ್ಲಿ ತಲ್ಲೀನರಾದವರೇ ಬುದ್ಧಿ ಸರಿ ಇದ್ದವರು, ಇದಕ್ಕೆ ಹೊರತಾಗಿ ಧರ್ಮ, ದೇವರು, ರಾಷ್ಟ್ರ, ಸಮಾಜ, ದೀನದಲಿತರು ಮುಂತಾದುವುಗಳ ಬಗ್ಗೆ ಚಿಂತಿಸುವವರೆಲ್ಲ ಜನರ ಕಣ್ಣಿಗೆ ಹುಚ್ಚರಾಗಿ ತೋರುತ್ತಾರೆ; ಹೀಗಾಗಿ ಧನಾಸಕ್ತ ಜನರು ಆದರ್ಶವಾದಿಗಳನ್ನು ವಿಲಕ್ಷಣವಾಗಿ ನೋಡುತ್ತಾರೆ.

ಇನ್ನು ಎರಡನೆಯ ಪ್ರಸಂಗ ; ಅದೂ ಅಷ್ಟೆ, ಆ ಹುಡುಗಿ ಬಹಳ ಓದುತ್ತಾಳೆ. ಅದು ತಪ್ಪು! ಫ್ಯಾಷನ್‌ಗೊಂಬೆಯಾಗಿ ಅಡ್ಡಾಡಿದರೆ ಅದೇನೂ ವಿಪರೀತ ಎನಿಸದು. ಆಕೆಯ ಬಗ್ಗೆ ಎರಡನೆ ಆಕ್ಷೇಪ, "ತುಂಬಾ ಮಾತನಾಡುತ್ತಾಳೆ. ಊಟಕ್ಕೆ ಮೊದಲು ವಚನ ಹೇಳಿ ಎಂದಳು."ಇದನ್ನು ಕೇಳಿ ಬಂಧುಗಳು ಬೇಜಾರು ಮಡಿಕೊಂಡರಂತೆ! ಇಂಥ ಲಿಂಗಾಯತರನ್ನು ಕಂಡು ನಗಬೇಕೊ ಅಳಬೇಕೊ ತಲೆ ಚಚ್ಚಿಕೋಬೇಕೊ, ಇವರನ್ನು ತಿದ್ದುವ ಉಸಾಬರಿಯೇ ಬೇಡ ಎಂದು ಮೌನ ತಾಳಬೇಕೊ?!

ಒಮ್ಮೆ ಹುಬ್ಬಳ್ಳಿಯಲ್ಲಿ ಪ್ರವಚನ ಕೇಳುತ್ತಿದ್ದ ಓರ್ವ ಶರಣೆ, ನಮ್ಮ ಮಕ್ಕಳು ಕಾನ್ವೆಂಟಿಗೆ ಹೋಗುತ್ತಾರೆ. ಅವರಿಗೆ ಕೆಲವು ಕ್ರೈಸ್ತ ಸ್ನೇಹಿತರಿದ್ದಾರೆ. ಅವರು ಕೇಳಿದರಂತೆ, "ಊಟ ಮಾಡುವ ಮೊದಲು ನಾವು ಬೈಬಲ್‌ನ ಕೆಲವು ಶ್ಲೋಕ ಹೇಳುತ್ತೇವೆ. ನೀವು ಏನು ಹೇಳುತ್ತೀರಿ?"

ಬಹಳಷ್ಟು ಚಿಂತನೆ, ಅಧ್ಯಯನ ಮಾಡಿ ಪ್ರಸಾದ ಸ್ವೀಕಾರಕ್ಕೆ ಮೊದಲು ಹೇಳಬಹುದಾದ ವಚನಗಳನ್ನು ಆಯ್ಕೆ ಮಾಡಿದೆವು. ನೀನೊಲಿದರೆ ಕೊರಡು ಎಂಬ ಧರ್ಮಪಿತರ ವಚನ, ಅವರನ್ನು ಸ್ಮರಿಸುವ ಆಯಿತು ಬಸವಾ ನಿನ್ನಿಂದ ಎಂಬ ಪ್ರಭುದೇವರ ವಚನ ಸಂಯೋಜಿಸಿ ಜೊತೆಗೆ ಸಂದರ್ಭಕ್ಕೆ ಸರಿ ಎನ್ನಿಸುವ ಭಾವ ಬರುವ ಒಂದು ಪದ್ಯವನ್ನು ನಾನು ಬರೆದು ರೂಢಿಗೆ ತಂದೆವು.

ಅಂದಂದಿನಾಹಾರ ತಂದೆಯಿಂದದಿ ನೀಡಿ
ಎಂದೆಂದು ಎಮ್ಮಗಳ ಸಲಹುತ್ತಲಿರುವ
ಇಂಬೀವ ಜಗದೊಡೆಯ ನನ್ನನಾನರ್ಪಿಸುವೆ
ನೆಂಬ ಶರಣಾಗತಿಯಿಂ ನೈವೇದ್ಯವಿಡುವೆ.

ಪ್ರತಿಯೊಂದು ಧರ್ಮವೂ ಸ್ಥಾಪನೆಯಾದ ಕೆಲವು ಸಮಯದ ನಂತರ ತಾತ್ವಿಕ ಚೌಕಟ್ಟಿಗೆ ಒಳಪಟ್ಟು ಸೂತ್ರೀಕರಣ ಹೊಂದಿರುತ್ತದೆ. ಆಗ ಪ್ರತಿಯೊಂದು ಆಚಾರ - ವಿಚಾರ, ವಿಧಿ -ವಿಧಾನ ಇತ್ಯಾದಿ ವಿವರಗಳು ಅದರ ಬಗ್ಗೆ ದೊರೆಯುತ್ತದೆ. ಕುರಾನ್, ಬೈಬಲ್, ತ್ರಿಪೀಟಕ, ಗ್ರಂಥ ಸಾಹೇಬ ಮುಂತಾದುವೆಲ್ಲ ಹಾಗೆ ಮಾರ್ಗದರ್ಶಕ (Guide)ಗಳಾಗಿವೆ. ಲಿಂಗಾಯತ ಧರ್ಮದಲ್ಲಿ ಆ ಕಾರ್ಯ ಆಗದೆ ಇರುವುದರಿಂದ ಅನುಯಾಯಿಗಳು ಸ್ವಧರ್ಮವನ್ನು ಬಿಟ್ಟು ಅನ್ಯರನ್ನು ಅನುಕರಣೆ ಮಾಡುತ್ತಾರೆ. ಇಲ್ಲವೇ ಅಜ್ಞಾನದಿಂದ ವರ್ತಿಸುತ್ತಾರೆ. ಊಟಕ್ಕೆ ಮೊದಲು ವಚನ ಹೇಳಿರಿ ಎಂದು ಆ ಹುಡುಗಿ ಹೇಳಿದಾಗ ಆಕೆಯ ಸಂಸ್ಕಾರಕ್ಕೆ ಮೆಚ್ಚಿಕೊಳ್ಳಬೇಕಾಗಿತ್ತು, ಅದರಲ್ಲಿ ಬೇಜಾರು ಮಾಡಿಕೊಳ್ಳುವಂಥದು ಏನಿದೆ ?

ಮೂರನೆಯ ಆಕ್ಷೇಪ ; ಯಾರೋ ಅಪಘಾತದಲ್ಲಿ ಸತ್ತರು ; ಈಕೆ ಹೋಗಿ ಅವರ ಶವಗಳಿಗೆ ವಿಭೂತಿ ಹಚ್ಚಿದಳು. ಅದರಲ್ಲಿ ಒಬ್ಬಾತ ಇವರ ಬಂಧು, ಇನ್ನೊಬ್ಬಾತ ಲಿಂಗಾಯತೇತರನು; ವಿಭೂತಿ ಧಾರಕ ಜಾತಿಯವನಲ್ಲ. ಅತ್ಯಂತ ಭೀಕರ ಅಪಘಾತದಲ್ಲಿ ಸತ್ತ ಶವಗಳನ್ನು ನೋಡಲಿಕ್ಕೇ ಕೆಲವರು ಹೆದರಿ ಸಾಯುವರು. ಈ ಹುಡುಗಿ ತಕ್ಷಣ ಸಮಯ ಪ್ರಜ್ಞೆ ಮೆರೆದು ಹೋಗಿ ವಿಭೂತಿ ಧರಿಸಿದಳು ಎಂದರೆ ಆಕೆಯ ಧೈರ್ಯ ಮೆಚ್ಚಬೇಕು. ನಾವು ಹೇಳುತ್ತಿರುತ್ತೇವೆ, "ಯಾರಾದರೂ ಪ್ರಾಣ ಬಿಡುವಾಗ ಅಳುತ್ತ ಕೂರದೆ ಹಣೆಗೆ ವಿಭೂತಿ ಧರಿಸಿ, ಕಿವಿಯಲ್ಲಿ ಮಂತ್ರ ಹೇಳಿ ಬಾಯಿಗೆ ತೀರ್ಥ ಮಾಡಿ ಹಾಕಿರಿ; ಈ ಪುಣ್ಯದ ಫಲದಿಂದಲಾದರೂ ಅವರಿಗೆ ಉತ್ತಮ ಜನ್ಮ ಬರುವಂತಾಗಲಿ" ಎಂದು. ಯಾರಾದರೇನು ವಿಭೂತಿ ಧರಿಸುವುದು ಅತ್ಯುತ್ತಮ ಕ್ರಿಯೆ.

ಗುರು - ಲಿಂಗ - ಜಂಗಮದ ಹೊರತಾಗಿ ಅನ್ಯದೈವಂಗಳ ಪೂಜೆ ಮಾಡಬಾರದು; ಇದು ಇಷ್ಟಲಿಂಗಧಾರಿಗಳಿಗೆ ಹಾಕಲ್ಪಟ್ಟ ನಿಯಮ. ವಚನ ಸಾಹಿತ್ಯವನ್ನು ಓದಿ ತಿಳಿದುಕೊಂಡ ಈ ಹುಡುಗಿ ತಮ್ಮ ಮನೆಯವರಿಗೆ ತನ್ನ ಧರ್ಮದ ಏಕದೇವೋಪಾಸನೆಯ ಬಗ್ಗೆ ತಿಳಿಸಿ ಕೊಟ್ಟರೆ ಅದನ್ನೇ ತಪ್ಪು ಎನ್ನುವ ಪರಿಸ್ಥಿತಿ ಲಿಂಗಾಯತ ಸಮಾಜದ್ದು. ಈಗ ನಮ್ಮನ್ನಾದರೂ ಹಲವರು ಮಠಾಧೀಶರು ದ್ವೇಷ ಮಾಡುವ ಹಿನ್ನೆಲೆ ಇದೇ. ಅಂಗದ ಮೇಲೆ ಇಷ್ಟಲಿಂಗ ಧರಿಸಿದ ಬಳಿಕ ಗುರು -ಲಿಂಗ -ಜಂಗಮದ ಹೊರತು ಅನ್ಯವನ್ನು ಪೂಜಿಸುವುದು ಗೃಹಿಣಿ ಪತಿಯನ್ನುಳಿದು ಅನ್ಯ ಪುರುಷರನ್ನು ಬಯಸಿದಂತೆ, ಬೆರೆಸಿದಂತೆ ಎನ್ನುತ್ತದೆ ವಚನ ಶಾಸ್ತ್ರ. ಈ ತಪ್ಪನ್ನು ದೊಡ್ಡ ದೊಡ್ಡ ಮಠಾಧೀಶರು ಸಹ ಮಾಡುತ್ತಿದ್ದಾರೆ. ವಚನ ಸಾಹಿತ್ಯದ ಕನ್ನಡಿ ಹಿಡಿದು ಅವರ (ಕು)ರೂಪವನ್ನು ತೋರಿಸುತ್ತಿದ್ದೇವೆ ಬರಹಗಳ ಮೂಲಕ ಎಂದು ನಮ್ಮ ಮೇಲೆ ಅಸಹನೆ. ಬಹುಶಃ ಇಂಥ ಅಜ್ಞಾನ ಯುಕ್ತ ಗುರುಗಳು ಮತ್ತು ಧರ್ಮಾನುಯಾಯಿಗಳು ಲಿಂಗಾಯತ ಸಮಾಜ ಬಿಟ್ಟು ಬೇರೆ ಧರ್ಮದ ಸಮಾಜಗಳಲ್ಲಿ ಇರಲಿಕ್ಕಿಲ್ಲ.

ಮಗಳು ಹೀಗೇಕೆ ಮಾಡುತ್ತಾಳೆ ಎಂದು ಶಾಸ್ತ್ರ ಕೇಳಲು ಹೋದರೆ ಆ ಶಾಸ್ತ್ರಿಗಳು "ನಿಮ್ಮ ಮನೆಯಲ್ಲಿ ಮೃತ್ಯುಂಜಯ ಹೋಮ ಮಾಡಿಸಿರಿ ಎಂದರಂತೆ." ನಮ್ಮ ಧರ್ಮಕ್ಕೆ ವಿರುದ್ಧವಾಗಿ ನಡೆದುದರಿಂದ ಬಹುಶಃ ನಮ್ಮ ಮಗಳು ಹೀಗೆ ಮಾಡುತ್ತಿರಬಹುದು ಎಂಬುದನ್ನು ಅರಿಯದ ಮಾತಾ ಪಿತೃಗಳು ಹೀಗೆ ಸ್ವಧರ್ಮಕ್ಕೆ ವಿರುದ್ಧವಾಗಿ ಹೋಮವನ್ನು ಮಾಡಿಸಲು ಸಿದ್ಧರಾಗಿದ್ದು ಇನ್ನೂ ಹಾಸ್ಯಾಸ್ಪದ. ಸೊಲ್ಲಾಪುರದ ಮಲ್ಲಪ್ಪ ವಾರದ ಅವರು ಮಕ್ಕಳು ಆಗಲಿಲ್ಲವೆಂದು ವೈದಿಕರ ಮಾತಿಗೆ ಮರುಳಾಗಿ ಪುತ್ರಕಾಮೇಷ್ಟಿಯಾಗ ಮಾಡಲು ತಯಾರಾದಾಗ ನಾಲತ್ವಾಡದ ವೀರೇಶ ಶರಣರು ಸತ್ಯಾಗ್ರಹ ಮಾಡಿ ಯಾಗ ಕುಂಡದಲ್ಲಿ ಧುಮುಕಲು ಸಿದ್ಧರಾದರಂತೆ. ಶ್ರೀಮಂತ (ಮೂಢ) ಭಕ್ತರು ಎಲ್ಲಿ ತಮ್ಮನ್ನು ಕರೆಯುವುದನ್ನು ಕೈ ಬಿಡುತ್ತಾರೋ ಎಂದು ಅಂಜಿ ಮಠಾಧೀಶರು ಭಕ್ತರಿಗೆ ಬುದ್ಧಿ ಹೇಳದೆ ಕೆಲವರು ಮೂಕ ಸಾಕ್ಷಿಯಾಗಿ ಇದ್ದರೆ ಮತ್ತೆ ಕೆಲವರು ಅವರ ಇಷ್ಟಕ್ಕೆ ತಕ್ಕಂತೆ ಹೋಮ ಮಾಡಿಸುತ್ತಾರೆ. ಸತ್ಯನಾರಾಯಣ,ನವಗ್ರಹಗಳನ್ನು ಪೂಜಿಸುತ್ತಾರೆ. ನಾವು ಸತ್ಯವನ್ನು ಪ್ರತಿಪಾದಿಸುತ್ತೇವೆ ಎಂದೇ ವೀರಶೈವವಾದಿ ಸಂಪ್ರದಾಯ ಲಿಂಗಾಯತರು ನಮ್ಮನ್ನು ಆಹ್ವಾನಿಸುವುದಿಲ್ಲ; ಒಂದು ರೀತಿ ಬಹಿಷ್ಕಾರವನ್ನು ಹಾಕಿದ್ದಾರೆ. ಆದರೇನಂತೆ ಸತತ ಪ್ರಯತ್ನ ಮತ್ತು ಪ್ರಚಾರದಿಂದ ಶುದ್ಧ ಬಸವ ಪಥಿಕರಾದ ಶರಣರು ತಯಾರಾಗಿದ್ದಾರೆ. ಬಿಡುವಿಲ್ಲದಂತೆ ಆಹ್ವಾನಿಸುತ್ತಾರೆ. ಹಾಗೆಯೇ ಎಲ್ಲ ಮಠಾಧೀಶರು ಕನಿಷ್ಠ ಪಕ್ಷ ವಿರಕ್ತಮಠಾಧೀಶರಾದರೂ ಕಟ್ಟುನಿಟ್ಟಾಗಿ ಪಾಲಿಸುತ್ತ, ತಮ್ಮ ಧರ್ಮದ ಸಂವಿಧಾನ ವಚನ ಸಾಹಿತ್ಯಕ್ಕೆ ಹೊರತಾದ ಕಾರ್ಯಕ್ರಮಕ್ಕೆ ಬರುವುದಿಲ್ಲ ಎಂದು ಹೇಳುತ್ತ ಬಂದಿದ್ದರೆ ಇಷ್ಟು ಹೊತ್ತಿಗೆ ಒಂದು ತತ್ತ್ವನಿಷ್ಠ ಅನುಯಾಯಿಗಳ ತಂಡ, ಸಮಾಜ ನಿರ್ಮಾಣವಾಗಿರುತ್ತಿತ್ತು.

ಅನ್ಯ ಧರ್ಮೀಯರು, ಲಿಂಗಾಯತೇತರರು ಆಹ್ವಾನಿಸುತ್ತಾರಲ್ಲ ಅವರಿಗೆ ಏನು ಹೇಳಬೇಕು? ಎಂಬ

ಪ್ರಶ್ನೆಯನ್ನು ಕೆಲವರು (ಮಾನಸಿಕವಾಗಿ) ನನಗೆ ಕೇಳಬಹುದು. ಅನೇಕ ಮುಸಲೀಮರು, ಕ್ರೈಸ್ತರು ತಮ್ಮ ಮಿತ್ರರೊಡನೆ ಯಾವಾಗಲಾದರೂ ದರ್ಶನಕ್ಕೆ ಬಂದಿರುತ್ತಾರೆ. ಆಗ ಅವರು ಲಿಂಗಾಯತರು ಮತ್ತು ಹಿಂದುಗಳಂತೆ ಗುರುಗಳಿಗೆ ಬಾಗಿ ನಮಸ್ಕರಿಸುವುದಿಲ್ಲ. ಪ್ರಸಾದ ಕೊಟ್ಟುದನ್ನು ಕೆಲವರು ಸ್ವೀಕರಿಸುವುದಿಲ್ಲ. ನಾವು ಕ್ರೈಸ್ತರು ಅಥವಾ ಮುಸಲೀಮರು ಎಂದು ಹೇಳುತ್ತಾರೆ. ಆಗ ನಾವೇನು ತಪ್ಪು ತಿಳಿಯುವುದಿಲ್ಲ.

ದೆಹಲಿಯಲ್ಲಿ ಸರ್ವ ಧರ್ಮ ಸಮಾವೇಶ ಮಾಡಿದೆವು. ಆಗ ತಮ್ಮ ತಮ್ಮ ಧರ್ಮದ ವೈಶಿಷ್ಟ್ಯದ ಬಗ್ಗೆ, ಸಾಮಾನ್ಯ ನೀತಿ ಮಾನವೀಯತೆ ಬಗ್ಗೆ ಪಾದ್ರಿಗಳು, ಮೌಲ್ವಿಗಳು ಮಾತನಾಡಿದರಲ್ಲದೆ, ಹಿಂದು ಧರ್ಮ ಹೇಳುವ "ಎಲ್ಲ ಧರ್ಮಗಳು ಸಮಾನ, ಎಲ್ಲ ದಾರಿಗಳು ದೇವರ ಬಳಿಗೆ ಹೋಗುವವು" ಎಂದು ಅವರು ಅರಿತು ಮರೆತೂ ಹೇಳಲಿಲ್ಲ. ಏಕೆಂದರೆ ಅವರ ಮನಸ್ಸಿನಲ್ಲಿ "ತಮ್ಮ ಧರ್ಮ ಎಲ್ಲಕ್ಕಿಂತ ಶ್ರೇಷ್ಠ ಎಂಬ ನಂಬಿಕೆ ದೃಢವಾಗಿ ಇರುತ್ತದೆ." ಅದು ನಿಜವೂ ಕೂಡ. "ಆಹಾರಕ್ಕಾಗಿ ನೀನು ಬದುಕಲಿಕ್ಕೆ ಪ್ರಾಣಿಗಳನ್ನು ಕೊಲ್ಲಬಹುದು." ಎಂದು ಹೇಳುವ ಧರ್ಮ "ನೀನು ಬದುಕು, ಉಳಿದ ಪ್ರಾಣಿಗಳ ಬದುಕುವ ಹಕ್ಕನ್ನು ಕಸಿದುಕೊಳ್ಳಬೇಡ; ಸಕಲ ಜೀವರ ಲೇಸು ಬಯಸು," ಎಂದು ಬೋಧಿಸುವ ಧರ್ಮಕ್ಕೆ ಹೇಗೆ ಸಮನಾಗಬಲ್ಲುದು ? ಆದರಿಷ್ಟೇ ನಮ್ಮ ಧರ್ಮಗಳಲ್ಲಿರುವ ಶ್ರೇಷ್ಠ ತತ್ತ್ವಗಳನ್ನು ಅರಿಯದೆ ಇದ್ದರೆ ನಮಗೆ ಅಭಿಮಾನ ಹುಟ್ಟುವುದು ಹೇಗೆ ಸಾಧ್ಯ? ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಡಲು ಹೇಗೆ ಸಾಧ್ಯ? ಏಕದೇವೋಪಾಸನೆ, ಸಾಮಾಜಿಕ ಸಮಾನತೆ, ಪ್ರಗತಿಪರ ಚಿಂತನೆ ಮುಂತಾದುವು ನಮ್ಮ ಧರ್ಮದ ಶ್ರೇಷ್ಠ ಕೊಡುಗೆ ಎಂಬ ತಿಳುವಳಿಕೆ ಅನೇಕ ಮಠಾಧೀಶರಲ್ಲೇ ಇಲ್ಲ ಎಂದಾಗ ಅವರು ತಮ್ಮ ಅನುಯಾಯಿಗಳಿಗೆ ಏನು ಹೇಳಿಕೊಡಬಲ್ಲರು ? ನಮ್ಮ ಮನೆಯಲ್ಲಿ ಪೂಜಾಗೃಹದಲ್ಲಿ ಹಲವಾರು ದೇವತೆಗಳ, ವ್ಯಕ್ತಿಗಳ ಭಾವಚಿತ್ರಗಳು ಇದ್ದವು. ದಿನಾಲು ಒಂದು ಗುಡಿಯನ್ನು ಸಂದರ್ಶಿಸುತ್ತಿದ್ದೆವು. ಪೂಜ್ಯ ಅಪ್ಪಾಜಿಯವರ ಒಂದು ಭಾಷಣ ಕೇಳಿ, ಲಿಂಗ ತತ್ತ್ವ ದರ್ಪಣ ಓದಿದ ಮೇಲೆ ಒಂದೇ ಸಲಕ್ಕೆ ಎಲ್ಲವನ್ನೂ ಬಿಟ್ಟು ಇಷ್ಟಲಿಂಗ ಪೂಜೆಗೆ ಮಾತ್ರ ನಾನು ಬದ್ಧಳಾದೆ. ಕೆಲವು ಮಠಾಧೀಶರೇ ತಮ್ಮ ವಚನ ಸಾಹಿತ್ಯ ಸಂವಿಧಾನಕ್ಕೆ ವಿರುದ್ಧವಾಗಿ ಬಹುದೇವತೋಪಾಸಕರಾಗಿರುವುದರಿಂದ ತಿಳುವಳಿಕೆಯುಳ್ಳ ಜನರು ಏಕಲಿಂಗ ನಿಷ್ಠೆ ಬಗ್ಗೆ ಹೇಳಿದರೆ ಕೆಲವರು ಉಡಾಫೆ ಮಾತಾಡುತ್ತ, "ನಿಂದೇನು ನಮ್ಮ ಸ್ವಾಮೇರೆ ಮಾಡುತ್ತಾರೆ." ಎಂದು ವ್ಯಂಗ್ಯವಾಡುತ್ತಾರೆ. ಹೀಗಾಗಿ ಆ ಹುಡುಗಿ ಅನ್ಯ ದೇವತೆಗಳ ಪೂಜೆ ಮಾಡಬಾರದು ಎಂದರೆ ತಾಯಿತಂದೆಗೆ ಅಚ್ಚರಿ.

ಇಂಥ ಸಂದರ್ಭದಲ್ಲಿ ಮನೋರೋಗಿಗಳು ಏಕಾಗುತ್ತಾರೆ ಎಂದರೆ, ಈ ಆದರ್ಶವಾದಿ, ಸತ್ಯವಾದಿಗಳಾದ ನಮ್ಮನ್ನು ಇವರು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂಬ ಕೊರಗು ಅವರನ್ನು ಕಾಡುತ್ತದೆ. ಇದಕ್ಕೆ ಪರಿಹಾರವೆಂದರೆ ಎರಡು.

1. ತತ್ತ್ವ ಹೇಳಿ ಮನಸ್ಸು ಪರಿವರ್ತನೆ ಮಾಡಲು ಪ್ರಯತ್ನಿಸಬೇಕು. ಅವರು ಎಷ್ಟೂ ಅರ್ಥ ಮಾಡಿಕೊಳ್ಳದವರಾದರೆ ಅಂಥವರ ಜೊತೆ ವಾದ, ಚರ್ಚೆ ಮಾಡಲು ಹೋಗಬಾರದು. ಅವರು ಅರ್ಥ ಮಾಡಿಕೊಳ್ಳಲಿಲ್ಲ ಎಂದು ಕೊರಗಿ ಮಂಕಾಗಿ, ಚಿಂತೆಯನ್ನೂ ಮಾಡಬಾರದು.
2. ಸಮಾನ ಮನಸ್ಕರಾಗಿ ಚಿಂತನೆ ಮಾಡಬಲ್ಲವರ ಮಧ್ಯೆ ಮಾತ್ರ ತನ್ನ ಆಲೋಚನೆಗಳನ್ನು ತೆರೆದಿಡಬೇಕು. ಅಂಥವರು ಸಿಗದಿದ್ದಾಗ ಉತ್ತಮ ಪುಸ್ತಕಗಳನ್ನು ಓದಬೇಕು. ತನ್ನ ಆಲೋಚನೆಗಳನ್ನು ಬರವಣಿಗೆ ರೂಪದಲ್ಲಿ ವ್ಯಕ್ತಪಡಿಸಿ ಸಮಾಧಾನ ಪಟ್ಟುಕೊಳ್ಳಬೇಕು. ವೀರಶೈವ ವಾದಿಗಳ ಮುಂದೆ ನಾವು ಲಿಂಗಾಯತ ಪದದ ಮಹತ್ವ ಲಿಂಗದೇವನ ವೈಶಿಷ್ಟ್ಯ ಕುರಿತು ವಿವರಿಸುತ ಸಮಯ, ಶಕ್ತಿ

ವ್ಯರ್ಥ ಮಾಡಿಕೊಳ್ಳುವ ರೀತಿ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆಯೇ ಸರಿ! ಧರ್ಮಪಿತರು ಹೀಗೆ ಹೇಳುತ್ತಾರೆ :

ಕೂಪವರಿಗೆ ಹೇಳುವೆ ಕುಳಸ್ಥಳಂಗಳೆಲ್ಲವನು
ಕೂರದವರ ಮುಂದೆ ಹೇಳಿ ನಾನೇವೆ ಶಿವನೆ?
ಕರಲ ಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ
ಅವರೆತ್ತ ಬಲ್ಲರು ಎನ್ನ ಸುಖ - ದುಃಖವ ?
ಅಂಗತವಿಲ್ಲದ ಸಂಗ, ಅಳಲಿಲ್ಲದ ಹುಯ್ಯಲಂತೆ
ಇದು ಕಾರಣ, ಲಿಂಗದೇವಾ
ನಿಮ್ಮ ಶರಣರಿಗಲ್ಲದೆ ಬಾಯಿದೆರೆಯೆನು.

ಕೂಪವರು ಎಂದರೆ ಆತ್ಮೀಯರು, ಪ್ರೀತಿಸುವವರು, ಸಮಾನ ಚಿಂತಕರು. ಇವರ ಮುಂದೆ ಕುಳಸ್ಥಳಂಗಳನ್ನು ಅಂದರೆ ಆಧ್ಯಾತ್ಮಿಕ ರಹಸ್ಯ, ಅನುಭವ, ಅಥವಾ ಸಾಧನೆಯ ಏಳು ಬೀಳು, ಪ್ರಗತಿ - ವಿಗತಿ ಮುಂತಾದುವನ್ನು ಹೇಳಬಹುದು. ಅರ್ಥವನ್ನೇ ಮಾಡಿಕೊಳ್ಳದ ಜನರ ಮುಂದೆ ಹೇಳಿ ಏನು ಪ್ರಯೋಜನ? ಕರಲು ಭೂಮಿ, ಕಲ್ಲು ಮಿಶ್ರಿತವಾದ ಸಾರವಿಲ್ಲದ ಭೂಮಿಯ ಮೇಲೆ ಮಳೆ ಬಿದ್ದರೆ ಹೇಗೆ ಅದು ಹಿಡಿದುಕೊಂಡು, ಅರಳುವುದಿಲ್ಲವೊ ಹಾಗೆ ಅಂಥ ಜನರ ಮುಂದೆ ಆಧ್ಯಾತ್ಮಿಕ ಸಮಸ್ಯೆ ಹೇಳಿಕೊಂಡರೆ ಸ್ಪಂದಿಸುವುದಿಲ್ಲ. ಸಾಧಕ ಜೀವಿಗಳ ಹಂಬಲ ಅವರ ಕಣ್ಣಿಗೆ ಹುಚ್ಚರ ನಡೆಯಂತೆ ತೋರುತ್ತದೆ. "ಸಾಮರಸ್ಯವಿಲ್ಲದ ಸಂಗ, ದುಃಖವಿಲ್ಲದೆ ಅಳುವ ಹುಯ್ಯಲಿನಂತೆ ಇರುತ್ತದೆ. ಆದ್ದರಿಂದ ಲಿಂಗದೇವನೆ ನಿಮ್ಮ ಶರಣರ ಮುಂದೆ ಮಾತ್ರ ನನ್ನ ಒಳಮನಸ್ಸನ್ನು ತೆರೆದು ಇಡುತ್ತೇನೆ." ಎನ್ನುತ್ತಾರೆ ಧರ್ಮಪಿತರು.

ಈ ರೀತಿಯ ಜಾಣ್ಮೆ, ತಿಳುವಳಿಕೆಯನ್ನು ಆದರ್ಶವಾದಿಗಳು ಬೆಳೆಸಿಕೊಳ್ಳದೆ ಇದ್ದರೆ ಅವರಿಗೆ ಹುಚ್ಚಾಸ್ಪತ್ರೆಗಳೇ ಗತಿಯಾಗುತ್ತವೆ!

ಕಲ್ಯಾಣ ಕ್ರಾಂತಿಯ ಭಾವಚಿತ್ರ

ವಿಜಯದಶಮಿಯಂದು ಕಲ್ಯಾಣ ಕ್ರಾಂತಿಯಲ್ಲಿ ಹುತಾತ್ಮರಾದ ಶರಣರ ಸ್ಮರಣೋತ್ಸವ ಮಾಡಲು ನಿರ್ಧರಿಸಲಾಗಿದೆಯಷ್ಟೆ. ಈ ಉತ್ಸವದಲ್ಲಿ ಮೆರವಣಿಗೆ ಮಾಡಬೇಕಾದ ಭಾವಚಿತ್ರಗಳೆಂದರೆ,

1. ವಿಶ್ವಗುರು ಬಸವಣ್ಣನವರು
2. ಹರಳಯ್ಯ - ಕಲ್ಯಾಣಮ್ಮರು ಚಮ್ಮಾವುಗೆ ಮಾಡುವ ಪ್ರಸಂಗ
3. ಹುತಾತ್ಮ ಚೇತನರಾದ ಹರಳಯ್ಯ - ಮಧುವರಸ - ಶೀಲವಂತರಿಗೆ ಎಳೆಹೂಟೆ

ವಿಶೇಷ ಮುದ್ರಣ (ವಿನಾಯಿಲ್ ಪ್ರಿಂಟಿಂಗ್)ದಲ್ಲಿ ವಿವಿಧ ಅಳತೆಯ ಭಾವಚಿತ್ರಗಳು ಲಭ್ಯವಿರುತ್ತವೆ. ಅವುಗಳನ್ನು ಮಾಡಿಸಿ ಕೊಡಲಾಗುವುದು. ಸ್ಥಳೀಯವಾಗಿ ಫ್ರೇಮ್ ಹಾಕಿಸಿಕೊಳ್ಳಬೇಕು.

2' X 3' - 100 ರೂ + ಸಾಗಾಣಿಕೆ ವೆಚ್ಚ 50 ರೂ
3' X 4' - 200 ರೂ + ಸಾಗಾಣಿಕೆ ವೆಚ್ಚ 50 ರೂ

ಭಾವಚಿತ್ರ ಬೇಕಾದವರು ಭಾವಚಿತ್ರದ ಹಣ ಮತ್ತು ಸಾಗಾಣಿಕೆ ವೆಚ್ಚ 50 ರೂ ಸೇರಿಸಿ ಹಣವನ್ನು ಕಳಿಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು - 560010

ಕಲ್ಯಾಣ ಕ್ರಾಂತಿ ಸಂಸ್ಮರಣೆಯ ಆಚರಣೆ

ಕಲ್ಯಾಣ ಕ್ರಾಂತಿ ಒಂದು ಅಪೂರ್ವ, ದಿಟ್ಟ ಹೆಜ್ಜೆಯ ಹೋರಾಟದ ಫಲಶ್ರುತಿ. ಭಾರತ ದೇಶದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಇಬ್ಬರು ವರ್ಣೀಯರ ನಡುವೆ ನಂಟಸ್ಥಿಕೆ ಗುರು ಬಸವಣ್ಣನವರ ನೇತೃತ್ವದಲ್ಲಿ ಬಸವ ಕಲ್ಯಾಣದಲ್ಲಿ ಜರುಗಿತು. ವಚನ ಸಾಹಿತ್ಯಸಂವಿಧಾನದ ಪ್ರಕಾರ, ಹುಟ್ಟು ಬ್ರಾಹ್ಮಣ ಮಧುವರಸ, ಜನ್ಮತಃ ಸಮಗಾರನಾದ ಶರಣ ಹರಳಯ್ಯ ಉಭಯತರೂ ಲಿಂಗಾಯತ ಧರ್ಮದ ದೀಕ್ಷೆ ಪಡೆದು ಶರಣರಾದ ಕಾರಣ ಸಮಾನರು, ಏಕ ಧರ್ಮೀಯರು. ಆದರೆ ಅಂದು ರೂಢಿಯಲ್ಲಿದ್ದ ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆಯ ಪ್ರಕಾರ ಅವರು ಭಿನ್ನವರ್ಣೀಯರು. ಶರಣ ಮಧುವರಸರ ಮಗಳನ್ನು ಹರಳಯ್ಯನವರ ಮಗನಿಗೆ ಮದುವೆ ಮಾಡಿಸಲು ಗುರು ಬಸವಣ್ಣನವರು ನೇತೃತ್ವ ವಹಿಸಿದ್ದರಿಂದ ಸಂಪ್ರದಾಯವಾದಿಗಳು ಸಿಡಿದೆದ್ದರು. ಗುರು ಬಸವಣ್ಣನವರನ್ನು ಗಡಿಪಾರು ಮಾಡಲಾಯಿತು, ಹರಳಯ್ಯ-ಮಧುವರಸ-ಶೀಲವಂತರನ್ನು ಎಳೆಹೂಟೆ ಶಿಕ್ಷೆಯ ಮೂಲಕ ಕೊಲ್ಲಲಾಯಿತು. ಈ ಎಲ್ಲ ಬಲಿದಾನವಾದುದು ಸ್ವಾರ್ಥಕ್ಕಾಗಿ, ಹೆಣ್ಣು ಹೊನ್ನು ಮಣ್ಣುಗಳ ಗಳಿಕೆ - ಉಳಿಕೆ -ಬಳಕೆಗಾಗಿ ಅಲ್ಲ ಸಮಾನತೆಯನ್ನು ಸಾರಲಿಕ್ಕೆ.

ಜಗತ್ತಿನಲ್ಲಿ ಧರ್ಮಕ್ಕಾಗಿ, ದೇವರಿಗಾಗಿ ಅನೇಕ ಹೋರಾಟ, ಬಲಿದಾನ ನಡೆದಿವೆ. ಭಾರತದಲ್ಲಿ ಬೌದ್ಧಭಿಕ್ಕುಗಳ, ಶಿಲುಬೆಯ ಮೇಲೆ ಏಸುವಿನ, ಸಿಖ್ ಧರ್ಮದಲ್ಲಿ ಗುರು ತೇಜ್ ಬಹೂದ್ದೂರ್, ಗುರು ಗೋವಿಂದ ಸಿಂಗರ ಬಲಿದಾನಗಳು ವಿಶ್ವವಿಖ್ಯಾತವಾಗಿವೆ. ಈ ಎಲ್ಲವನ್ನು ಮೀರಿಸುವ, ಸಮಾನತೆಗಾಗಿ ಆದ ಬಲಿದಾನ ಹರಳಯ್ಯ ಮಧುವರಸರದ್ದು. ಹುತಾತ್ಮರ ದಿನಗಳನ್ನು ಆಯಾ ಧರ್ಮಗಳ ಜನರು ಅತ್ಯಂತ ಭಕ್ತಿ- ನಿಷ್ಠೆ- ಕೃತಜ್ಞತೆಗಳಿಂದ ಆಚರಿಸುತ್ತಾರೆ. ಆ ಪರಿಪಾಠ ಲಿಂಗಾಯತ ಸಮಾಜದಲ್ಲಿ ಸಾಗಿ ಬಂದಿಲ್ಲದಿರುವುದು ಅತ್ಯಂತ ವಿಷಾದನೀಯ ಸಂಗತಿ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠದ ವತಿಯಿಂದ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಈಗಾಗಲೇ ನಾವು ಆಚರಣೆಯಲ್ಲಿ ತರಲಾಗಿದೆ.

ಕಾಲಜ್ಞಾನ ವಚನಗಳ ಪ್ರಕಾರ ಕಲ್ಯಾಣ ಕ್ರಾಂತಿ ನಡೆದುದು ರಾಕ್ಷಸನಾಮ ಸಂವತ್ಸರದ ಫಾಲ್ಗುಣ ಮಾಸದ ದ್ವಾದಶಿ, ತ್ರಯೋದಶಿ, ಚತುರ್ದಶಿಯಂದು. ಅದು ಹೋಳಿ ಹುಣ್ಣಿಮೆಯ ಸಮಯ. ಹಿಂದುಗಳು ಆಚರಿಸುವ ಹೋಳಿ / ಕಾಮನ ಹುಣ್ಣಿಮೆ ಮೂಲತಃ ಯೋಗಿರಾಜ ಶಿವನಿಗೆ ಸಂಬಂಧಿಸಿದ ಕಾಮ ನಿಗ್ರಹದ ಪವಿತ್ರ ಹಬ್ಬವಾಗಿದ್ದರೂ ಇಂದು ಅತ್ಯಂತ ಕೆಳಮಟ್ಟದ ಬೈಗುಳದ ಹಬ್ಬವಾದ್ದರಿಂದ ಆ ಸಮಯದಲ್ಲಿ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಭಕ್ತಿಯಿಂದ ಆಚರಿಸಲು ಸಾಧ್ಯವಾಗದು. ಹುಣ್ಣಿಮೆಯ ಆಸುಪಾಸಿನ ದಿನಗಳಲ್ಲಿ ಹೋಳಿ ಆಡುವ ಆಚರಣೆ ಇರುವುದರಿಂದ ಸಭ್ಯ ಜನರು ಮನೆಯ ಹೊರಗೆ ಬರುವುದಿಲ್ಲ. ಕೆಲವೊಮ್ಮೆ ದೂರದ ಸ್ಥಳಗಳಿಗೆ ಹೋಗಿ ಇದ್ದು ಬಿಡುತ್ತಾರೆ. ಆದ್ದರಿಂದ ಅಂದು ಘಟನೆ ನಡೆದುದು ಫಾಲ್ಗುಣ ಮಾಸದ ಹೋಳಿ ಹುಣ್ಣಿಮೆಯ ಸಮಯದಲ್ಲಿ ಆಗಿದ್ದರೂ ಇದನ್ನು ಬೇರೊಂದು ಸಮಯದಲ್ಲಿ ಆಚರಿಸಬೇಕೆಂದು ಕಲ್ಯಾಣ ಪರ್ವದ ಚಿಂತನಗೋಷ್ಠಿಯಲ್ಲಿ ಚರ್ಚಿಸಿ ನಿರ್ಧರಿಸಲಾಯಿತು. ಎಲ್ಲರೂ ಇದನ್ನು ಒಮ್ಮತದಿಂದ ಬೆಂಬಲಿಸಿದರಲ್ಲದೆ, ದಸರಾ ಸಮಯದಲ್ಲಿ ಆಚರಿಸುವುದು ಸೂಕ್ತ ಎಂಬ ನಿರ್ಣಯಕ್ಕೆ ಬರಲಾಗಿದೆ. ಇದರಿಂದ "ಘಟ್ಟ" ಕೂರಿಸುವ ಸಂಪ್ರದಾಯವಿರುವ ಕೆಲವು ಭಾಗಗಳಲ್ಲಿ, ನವರಾತ್ರಿ ಸಮಯದಲ್ಲಿ ದೇವಿ ಪುರಾಣ ಓದುವ ಪರಿಪಾಠವಿರುವಲ್ಲಿ ಅವನ್ನು ಬಿಡಿಸಲು ಅನುಕೂಲವಾಗುವುದೆಂದು ಸೂಚಿಸಿದಾಗ ಶರಣ ಬಂಧುಗಳು ತುಂಬಾ ಸಂತೋಷದಿಂದ ಒಪ್ಪಿಕೊಂಡರು. ಆದ್ದರಿಂದ ಕಲ್ಯಾಣ

ಕ್ರಾಂತಿಯ ಸಂಸ್ಮರಣೆಯನ್ನು ಮುಂದೆ ತಿಳಿಸಿದಂತೆ ಮಾಡಬೇಕೆಂದು ನಿರ್ಧರಿಸಲಾಗಿದೆ.

ಅಶ್ವಯುಜ ಮಾಸದ ಅಮವಾಸ್ಯೆ(21-9-2006 ಮತ್ತು 22-9-2006 ಎರಡು ದಿನ ಇದೆ)ಯ ಮರುದಿವಸದಿಂದ (2006 ವರ್ಷದ ಸಾಲಿನಲ್ಲಿ ಸೆಪ್ಟಂಬರ್ 22 ರಿಂದ) ಹತ್ತು ದಿವಸಗಳ ಕಾಲ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಆಚರಿಸಬೇಕು. 9 ದಿವಸಗಳನ್ನು 9 ಶರಣರ ಹೆಸರಿನಲ್ಲಿ ಆಚರಿಸಿ ಅವರುಗಳ ಜೀವನ ಚರಿತ್ರೆ ಪಾರಾಯಣ ಮಾಡಬೇಕು.

1. ಪ್ರತಿಪದೆ (23-9-2006) ಗುರು ಬಸವಣ್ಣನವರ ಚರಿತ್ರೆ
2. ದ್ವಿತೀಯ (24-9-2006) ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ದೇವರ ಚರಿತ್ರೆ
3. ತೃತೀಯ (25-9-2006) ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಚರಿತ್ರೆ
4. ಚತುರ್ಥಿ (26-9-2006) ಬಸವ ಯೋಗಿ ಸಿದ್ಧರಾಮೇಶ್ವರರ ಚರಿತ್ರೆ
5. ಪಂಚಮಿ (27-9-2006) ವೀರ ವಿರಾಗಿಣಿ ಅಕ್ಕಮಹಾದೇವಿಯ ಚರಿತ್ರೆ
6. ಷಷ್ಠಿ (28-9-2006) ವೀರ ಗಣಾಚಾರಿ ಮಡಿವಾಳ ಮಾಚಿದೇವರ ಚರಿತ್ರೆ
7. ಸಪ್ತಮಿ (29-9-2006) ವೀರ ಮಾತೆ ಅಕ್ಕನಾಗಲಾಂಬಿಕೆಯ ಚರಿತ್ರೆ
8. ಅಷ್ಟಮಿ (30-9-2006) ಸರ್ವ ಶರಣರ ಸ್ಮರಣೆ
9. ಮಹಾನವಮಿ(1-10-2006) ಹರಳಯ್ಯ - ಮಧುವರಸ- ಶೀಲವಂತರ ಸಂಸ್ಮರಣೆ
10. ವಿಜಯ ದಶಮಿ(2-10-2006) ಬಸವ ಧರ್ಮ ವಿಜಯೋತ್ಸವ, ಪ್ರಸಾದ ದಾಸೋಹ.

ಆಚರಣೆ ವಿವರ : ನಡುಮನೆಯಲ್ಲಿ ಸುಂದರ ಮಂಟಪ ಕಟ್ಟಿ, ಗುರು ಬಸವಣ್ಣನವರ ಭಾವಚಿತ್ರ ಇಟ್ಟು ಅಲಂಕರಿಸಬೇಕು. ಪ್ರತಿಪದೆ ದಿನ ಮಾತ್ರ ಪೂರ್ತಿ ಪೂಜಾವ್ರತ ಮಾಡಿ ದಿನ ನಿತ್ಯ ಸಂಕ್ಷಿಪ್ತ ಪೂಜೆ ಮಾಡಿ ಆ ದಿನದ ಶರಣರ 108 ಸ್ತುತಿ ಪಠಿಸಬೇಕು.

1. ಪ್ರತಿಪದೆ (23-9-2006) ಬಸವೇಶ್ವರ ಪೂಜಾವ್ರತ.
2. ದ್ವಿತೀಯ (ದಿ.24) ಅಲ್ಲಮ ಪ್ರಭು ದೇವರ ಚರಿತ್ರೆ + ಅವರ 108 ಸ್ತುತಿ. - ಷ.ಸ್ತು ಮುಂದಿನ 4 ದಿನಗಳ ಕಾಲ ಮಾಡುವ ಶರಣರ ಸ್ಮರಣೆಯ ಸ್ತುತಿಗಳು ಲಭ್ಯವಿವೆ.

ಶರಣೆ. ವನಜಾ ಶ್ರೀನಿವಾಸ್ "ಷಡುಗಣಾಧೀಶರ ಸ್ತುತಿ" ಎಂಬ ಪುಸ್ತಕವನ್ನು ಬರೆದಿದ್ದು ವಿಶ್ವಕಲ್ಯಾಣ ಮಿಷನ್ ದಿಂದ ಪ್ರಕಟಿಸಲಾಗಿದೆ. ಅಂಚೆ ವೆಚ್ಚ ಸೇರಿ (ಬೆಲೆ 15 ರೂ) ಅದರಲ್ಲಿ 6 ಜನ ಗಣಾಧೀಶರ 108 ನಾಮಾವಳಿಗಳಿವೆ. ಅಕ್ಕನಾಗಲಾಂಬಿಕೆ ಕುರಿತ ಪುಸ್ತಕವೂ ಇದೆ. ಅಂಚೆ ವೆಚ್ಚ ಸೇರಿ (ಬೆಲೆ 20 ರೂ) ಅಷ್ಟಮಿಯ ದಿವಸ ಪಠಿಸಲು ಶರಣರ ಹೆಸರುಗಳಿವೆ. (ಇದೇ ಸೆಪ್ಟಂಬರ್ ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗಿರುವುದು. ಹಬ್ಬದ ಹೊತ್ತಿಗೆ ಕಲ್ಯಾಣ ಕಿರಣವು ತಲುಪಿರುತ್ತದೆ). ಮಹಾನವಮಿಯ ದಿವಸ ಹರಳಯ್ಯನವರ ಚರಿತ್ರೆ ಓದಬೇಕು.

ವಿಜಯದಶಮಿಯ ದಿವಸ ಮೆರವಣಿಗೆ ಇಡಬೇಕು. ಗುರು ಬಸವಣ್ಣನವರ ಭಾವಚಿತ್ರ, ಎಳೆ ಹೂಟೆ ಶಿಕ್ಷೆಯ ಭಾವಚಿತ್ರವನ್ನಿಟ್ಟು ಉತ್ಸವ ಆಚರಿಸಬೇಕು. ವರ್ಷದಲ್ಲಿ 2 ಉತ್ಸವಗಳು, ಒಂದು ಬಸವ ಜಯಂತಿಯಂದು ಇನ್ನೊಂದು ವಿಜಯದಶಮಿಯಂದು ನಡೆಸಬೇಕು. ಅನ್ಯ ಜನರು ಬನ್ನಿ ಮುಡಿಯುವ ಆಚರಣೆ ಮಾಡುತ್ತಾರೆ. ಶರಣ ಬಂಧುಗಳು ಹುತಾತ್ಮರಾದ ಶರಣರ ಮೆರವಣಿಗೆ ಮಾಡಬೇಕು.

ರಾಷ್ಟ್ರೀಯ ಬಸವ ದಳ, ಬಸವ ತತ್ತ್ವ ಪ್ರಚಾರಕ ಸಂಘ-ಸಂಸ್ಥೆಗಳು ಇರುವವರು ಒಂಬತ್ತು ದಿನ ಪ್ರತಿನಿತ್ಯ ಸಂಜೆ ಕಲ್ಯಾಣ ಕ್ರಾಂತಿಯ ಪುಸ್ತಕವನ್ನು ಅಥವಾ ಎಲ್ಲರಿಗೆ ಚೆಲ್ಲಾದ ಕಲ್ಯಾಣ ಬಸವಯ್ಯ ಪುಸ್ತಕವನ್ನಾಗಲಿ ಓದಿ, ವ್ಯಾಖ್ಯಾನ ಮಾಡಬೇಕು. ಇನ್ನು ಪ್ರತಿಯೊಬ್ಬರೂ ತಮಗೆ ಸಾಧ್ಯವಾದಷ್ಟು ವಚನಗಳನ್ನು ಚಿಕ್ಕ ಕಾಗದದ ತುಂಡು ಮಾಡಿ, ಅದರಲ್ಲಿ ಬರೆಯಬೇಕು.

ಮಾದರಿ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಲಿಂಗದೇವನು ಎಂತೊಲಿವನಯ್ಯ

- ಧರ್ಮಪಿತ ಗುರು ಬಸವಣ್ಣನವರು

ಬರೆದವರು : ವಚನಶ್ರೀ

ನಿಷ್ಠೆಯಿಂದ, ಸುಂದರವಾಗಿ, ವಚನಗಳನ್ನು ಅರ್ಥಮಾಡಿಕೊಳ್ಳುತ್ತ ಬರೆಯಬೇಕು. ವಿಜಯದಶಮಿಯ ಉತ್ಸವದಂದು ಶರಣ ಬಂಧುಗಳಿಗೆ ಹಂಚಬೇಕು. ಮೆರವಣಿಗೆ ಹೋಗುವಾಗ ದಾರಿಯಲ್ಲಿ ಭೇಟಿಯಾದವರಿಗೆ ಶರಣಾರ್ಥಿ ಸಲ್ಲಿಸಿ ವಚನ ಪ್ರಸಾದ ಹಂಚುತ್ತ ಸಾಗಬೇಕು.

ವಿಜಯ ದಶಮಿಯಂದು ಮೆರವಣಿಗೆಯ ನಂತರ ಕಾರ್ಯಕ್ರಮ ಏರ್ಪಡಿಸಿ, ಬಸವ ಧರ್ಮ ವಿಜಯೋತ್ಸವ ಆಚರಿಸಬೇಕು. ಗಣ ದಾಸೋಹವನ್ನು ಮಾಡಬೇಕು. ಹೀಗೆ ದಸರಾದ 10 ದಿವಸಗಳನ್ನು ಕಲ್ಯಾಣ ಕ್ರಾಂತಿಯ ಸಂಸ್ಮರಣಾ ಉತ್ಸವವನ್ನಾಗಿ ಆಚರಿಸಬೇಕು.

ವಿಶೇಷ ಸೂಚನೆ

ಆಗಸ್ಟ್ ತಿಂಗಳಿನ ಕಲ್ಯಾಣ ಕಿರಣದಲ್ಲಿ ಈ ಲೇಖನವನ್ನು ಪ್ರಕಟಿಸಲಾಗಿದ್ದಿತು. ಈ ಬಗ್ಗೆ ತಮ್ಮ ಅಭಿಪ್ರಾಯ, ಆಕ್ಷೇಪ ಸಲ್ಲಿಸಲು ಸೂಚಿಸಲಾಗಿದ್ದಿತು. ಒಂದು ಪತ್ರ, ಹೋಳಿ ಹುಣ್ಣಿಮೆ ಸಮಯದಲ್ಲೇ ಕಲ್ಯಾಣ ಕ್ರಾಂತಿ ನಡೆದಿರುವುದರಿಂದ ಅದೇ ಸಮಯದಲ್ಲಿ ಆಚರಣೆ ಮಾಡುವುದೇ ಸೂಕ್ತ ಎಂದು ಬಂದಿದೆ. ಇನ್ನೊಂದು ಪತ್ರ, ದಸರಾ ಸಮಯದಲ್ಲಿ ಮಾಡುವುದು ಸಂಪ್ರದಾಯದ ಅನುಕರಣೆಯಾವಾಗುವುದಲ್ಲವೇ? ಎಂದು ಬಂದಿದೆ. ಈ ವಿಷಯವಾಗಿ ಕಲ್ಯಾಣ ಪರ್ವದಲ್ಲಿ ಸುದೀರ್ಘ ಚರ್ಚೆ ಮಾಡಿದಾಗ ಹೆಚ್ಚಿನ ಜನರು ದಸರಾದ ಸಮಯದಲ್ಲಿ ಕಲ್ಯಾಣ ಕ್ರಾಂತಿಯ ಸಂಸ್ಮರಣೆ ಆಚರಿಸಲಿಕ್ಕೆ ಒತ್ತುಕೊಟ್ಟರು.

"ಮರಣವೇ ಮಹಾನವಮಿ" ಎಂಬು ಗುರು ಬಸವಣ್ಣನವರ ಪವಿತ್ರವಾಣಿಯ ಅನುಸಾರ ಮಹಾನವಮಿಯಂದು ಹುತಾತ್ಮ ಶರಣರ ಸಂಸ್ಮರಣೆ ಮಾಡುವುದು ಅತ್ಯಂತ ಸೂಕ್ತವಾಗುವುದು. ಹತ್ತು ದಿವಸಗಳ ಅವಧಿಯಲ್ಲಿ ರಜಾದಿನಗಳು ಬಹಳ ಬರುವುದರಿಂದ ಕಾರ್ಯಕ್ರಮಗಳನ್ನು ನಡೆಸಲು ಸಹ ಅನುಕೂಲಕರವಾಗುವುದು. ಮಹಾನವಮಿಯಂದು ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿಗಳಲ್ಲಿ ಪೂಜೆಯನ್ನು ಏರ್ಪಡಿಸುವುದರಿಂದ ಮೆರವಣಿಗೆ - ಪಥ ಸಂಚಲನದಲ್ಲಿ ಭಾಗವಹಿಸುವುದು ಆಗುವುದಿಲ್ಲ; ವಿಜಯ ದಶಮಿಯಂದೇ ಮೆರವಣಿಗೆ -ಪಥ ಸಂಚಲನ ಒಳ್ಳೆಯದು ಎಂದು ಬೆಳಗಾಂ ರಾ.ಬ.ದಳ ಅಧ್ಯಕ್ಷರಾದ ಶರಣ ಕೆ. ಬಸವರಾಜ್ ಅವರು ಸೂಚಿಸಿರುವುದು ಬಹಳ ಉತ್ತಮ ಎನ್ನಿಸಿದ ಕಾರಣ ವಿಜಯ ದಶಮಿಯಂದೇ ಶರಣರ ಭಾವಚಿತ್ರ ಮೆರವಣಿಗೆ ಮತ್ತು ಪಥ ಸಂಚಲನಕ್ಕೆ ಸೂಚಿಸಲಾಗಿದೆ. ತಮ್ಮ ಅನುಕೂಲತೆಗೆ ತಕ್ಕಂತೆ ಬೆಳಿಗ್ಗೆ ಅಥವಾ ಮಧ್ಯಾಹ್ನ ಮೆರವಣಿಗೆ ಮಾಡಿ ನಂತರ ಸಭೆ ನಡೆಸಬಹುದು ಅಥವಾ ಸಭೆಯ ನಂತರವೂ ಮೆರವಣಿಗೆ ಮಾಡಬಹುದು.

ಆದ್ದರಿಂದ ಇದೇ ವರ್ಷದ ದಿ.23-9-2006 ರಿಂದ ದಿ.2-10-2006 ರವರೆಗಿನ ಅವಧಿಯಲ್ಲಿ 811ನೆಯ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಶರಣ ಬಂಧುಗಳು ಆಚರಿಸಬೇಕೆಂದು ಕೋರುತ್ತೇವೆ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

ಆದಿ ಶರಣರ ಸ್ತೋತ್ರ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಜಯ ಜಯ ಘನಲಿಂಗ ಜಯ ಜಯ ಮಂಗಳಾಂಗ
ಜಯತು ಜಯ ಬಸವ ಗುರು ಪ್ರಾಣೇಶ ಲಿಂಗ
ಜಯ ಭಕ್ತ ವತ್ಸಲ ಇಷ್ಟ ಪ್ರದಾಯಕ
ಜಯ ಸಚ್ಚಿದಾನಂದ ಜಯ ಲಿಂಗದೇವ ॥

1. ಸೃಷ್ಟಿಕರ್ತ ಲಿಂಗದೇವನಿಗೆ ಶರಣು, ಶರಣು ಶರಣಾರ್ಥಿ
2. ಧರ್ಮಕರ್ತ ಗುರು ಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
3. ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರಿಗೆ ಶರಣು, ಶರಣು ಶರಣಾರ್ಥಿ
4. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
5. ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಶರಣು, ಶರಣು ಶರಣಾರ್ಥಿ
6. ವೀರ ವಿರಾಗಿಣಿ ಅಕ್ಕಮಹಾದೇವಿಗೆ ಶರಣು, ಶರಣು ಶರಣಾರ್ಥಿ
7. ವೀರ ಗಣಾಚಾರಿ ಮಡಿವಾಳ ಮಾಚಿದೇವರಿಗೆ ಶರಣು, ಶರಣು ಶರಣಾರ್ಥಿ
8. ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
9. ದಾಸೋಹಮೂರ್ತಿ ನೀಲಾಂಬಿಕಾತಾಯಿಗೆ ಶರಣು, ಶರಣು ಶರಣಾರ್ಥಿ
10. ಹುತಾತ್ಮ ಚೇತನ ಹರಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
11. ಧೀರ ಶರಣೆ ಕಲ್ಯಾಣಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
12. ಧೀರ ಶರಣ ಮಧುವರಸರಿಗೆ ಶರಣು, ಶರಣು ಶರಣಾರ್ಥಿ
13. ಧೀರ ಶರಣ ಶೀಲವಂತಯ್ಯನಿಗೆ ಶರಣು, ಶರಣು ಶರಣಾರ್ಥಿ
14. ಧೀರ ಶರಣೆ ಲಾವಣ್ಯವತಿಗೆ ಶರಣು, ಶರಣು ಶರಣಾರ್ಥಿ
15. ಪರಮ ಪ್ರಸಾದಿ ಡೋಹಾರ ಕಕ್ಕಯ್ಯನವರಿಗೆ ಶರಣು, ಶರಣು ಶರಣಾರ್ಥಿ
16. ತತ್ತ್ವನಿಷ್ಠುರಿ ಅಂಬಿಗರ ಚೌಡಯ್ಯನವರಿಗೆ ಶರಣು, ಶರಣು ಶರಣಾರ್ಥಿ
17. ರಾಜಯೋಗಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
18. ಆದರ್ಶಸತಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
19. ಅಂಗಸೋಂಕಿನ ಲಿಂಗ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
20. ಅಣತಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
21. ಅಗ್ಘವಣಿಯ ಹಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
22. ಹಡಪದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
23. ನಿಜಲಿಂಗಯೋಗಿ ಅಜಗಣ್ಣ ತಂದೆಗಳಿಗೆ ಶರಣು, ಶರಣು ಶರಣಾರ್ಥಿ
24. ಅನಾಮಿಕ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
25. ಅಪ್ಪಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
26. ಅಮರ ಗುಂಡದ ಮಲ್ಲಿಕಾರ್ಜುನ ತಂದೆಗೆ ಶರಣು, ಶರಣು ಶರಣಾರ್ಥಿ
27. ಸ್ವಾಭಿಮಾನ ನಿಧಿ ಅಮುಗಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ

28. ಅರಿವಿನ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
29. ಅವಸರದ ರೇಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
30. ಸೌರಾಷ್ಟ್ರದ ಆದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
31. ಆನಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
32. ಆಯ್ದಕ್ಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
33. ನಿಸ್ವಾರ್ಥಸತಿ ಆಯ್ದಕ್ಕಿ ಲಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
34. ಉಗ್ಘಡಿಸುವ ಗಬ್ಬಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
35. ಉಪ್ಪರಗುಡಿಯ ಸೋಮಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
36. ಮಹಾಜ್ಞಾನಿ ಉರಿಲಿಂಗದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
37. ಚಿನ್ಮಯ ಶರಣ ಉರಿಲಿಂಗಪೆದ್ದಿ ಗುರುವಿಗೆ ಶರಣು, ಶರಣು ಶರಣಾರ್ಥಿ
38. ಉಳಿಯುಮೇಶ್ವರ ಚಿಕ್ಕಣ್ಣನವರಿಗೆ ಶರಣು, ಶರಣು ಶರಣಾರ್ಥಿ
39. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
40. ಎಲೆಗಾರ ಕಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
41. ಏಕಾಂತದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
42. ಏಲೇಶ್ವರದ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
43. ಒಕ್ಕಲಿಗ ಮುದ್ದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
44. ಕಳಿಂಗದೇಶದ ಸುಜ್ಞಾನಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
45. ಲಮಾಣಿ ನಾಯಕ ಸನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
46. ಗುಡ್ಡಾಪುರದ ದಾನಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
47. ವಚನಕಾರ್ತಿ ಅಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
48. ಜ್ಞಾನನಿಧಿ ವೀರಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
49. ಉದಾರ ಹೃದಯಿ ಚಂಗಳೆ ತಾಯಿಗೆ ಶರಣು, ಶರಣು ಶರಣಾರ್ಥಿ
50. ಲಿಂಗಪ್ರಾಣಿ ಕಮಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
51. ಭಕ್ತಿನಿಧಿ ಶರಣೆ ಸೋಮವ್ವೆಗೆ ಶರಣು, ಶರಣು ಶರಣಾರ್ಥಿ
52. ಸದಾಚಾರ ಸಂಪನ್ನೆ ಚೋಳೀಯಕ್ಕನಿಗೆ ಶರಣು, ಶರಣು ಶರಣಾರ್ಥಿ
53. ಜಂಗಮ ದಾಸೋಹಿ ನಿಂಬಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
54. ದಾಸಿಮಯ್ಯಗಳ ಸತಿ ದುಗ್ಗಳೆಗೆ ಶರಣು, ಶರಣು ಶರಣಾರ್ಥಿ
55. ಶರಣ ಪ್ರೇಮಿ ಸುಗ್ಗಲವ್ವ ತಾಯಿಗೆ ಶರಣು, ಶರಣು ಶರಣಾರ್ಥಿ
56. ಧೀರ ಶರಣೆ ಅಮುಗೆ ರಾಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
57. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
58. ನಾಗಿಮಯ್ಯಗಳ ಪುಣ್ಣಸ್ತ್ರಿಮಸಣಮ್ಮನಿಗೆ ಶರಣು, ಶರಣು ಶರಣಾರ್ಥಿ
59. ಕದಿರೆಯ ಕಾಯಕದ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
60. ಕದಿರರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
61. ಕನ್ನಡಿ ಕಾಯಕದ ಶರಣೆ ರೇಮಮ್ಮನಿಗೆ ಶರಣು, ಶರಣು ಶರಣಾರ್ಥಿ
62. ಕಾಟಕೂಟಯ್ಯಗಳ ಪುಣ್ಯ ಸ್ತ್ರೀ ಶರಣೆ ರೇಚವ್ವೆಗೆ ಶರಣು, ಶರಣು ಶರಣಾರ್ಥಿ

63. ಕಾಲಕಣ್ಣಿಯ ಕಾಯಕದ ಶರಣೆ ತಾಯಮ್ಮನಿಗೆ ಶರಣು, ಶರಣು ಶರಣಾರ್ಥಿ
64. ಕೊಂಡೆ ಮಂಚಣ್ಣಗಳ ಪುಣ್ಣಸ್ತ್ರೀ ಲಕ್ಷ್ಮಮ್ಮನಿಗೆ ಶರಣು, ಶರಣು ಶರಣಾರ್ಥಿ
65. ಕೊಟ್ಟಣ ಕಾಯಕದ ಶರಣೆ ಸೋಮಮ್ಮನಿಗೆ ಶರಣು, ಶರಣು ಶರಣಾರ್ಥಿ
66. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಶರಣೆಗೆ ಶರಣು, ಶರಣು ಶರಣಾರ್ಥಿ
67. ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿಗೆ ಶರಣು, ಶರಣು ಶರಣಾರ್ಥಿ
68. ಡೋಹರ ಕಕ್ಕಯ್ಯನವರ ಪುಣ್ಯ ಸ್ತ್ರೀ ಭಿಷ್ಟಾದೇವಿಗೆ ಶರಣು, ಶರಣು ಶರಣಾರ್ಥಿ
69. ಶರಣೆ ಗೊಗ್ಗವ್ವೆಗೆ ಶರಣು, ಶರಣು ಶರಣಾರ್ಥಿ
70. ದಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮಗೆ ಶರಣು, ಶರಣು ಶರಣಾರ್ಥಿ
71. ಬತ್ತಲೇಶ್ವರಯ್ಯಗಳ ಪುಣ್ಯ ಸ್ತ್ರೀ ಗುಡ್ಡವ್ವೆಗೆ ಶರಣು, ಶರಣು ಶರಣಾರ್ಥಿ
72. ಬಾಚಿಕಾಯಕದ ಬಸವಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
73. ನಿಜ ಮುಕ್ತೆ ಶರಣೆ ಮುಕ್ತಾಯಕ್ಕಗೆ ಶರಣು, ಶರಣು ಶರಣಾರ್ಥಿ
74. ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
75. ಕಾಶ್ಮೀರದ ರಾಜಪುತ್ರಿ ಬೊಂತಾದೇವಿಗೆ ಶರಣು, ಶರಣು ಶರಣಾರ್ಥಿ
76. ರೇವಣಸಿದ್ಧಯ್ಯಗಳ ಪುಣ್ಯ ಸ್ತ್ರೀ ರೇಕಮ್ಮನಿಗೆ ಶರಣು, ಶರಣು ಶರಣಾರ್ಥಿ
77. ಧೀಮಂತ ಶರಣೆ ಸತ್ಯಕ್ಕನಿಗೆ ಶರಣು, ಶರಣು ಶರಣಾರ್ಥಿ
78. ಸಿದ್ಧಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
79. ಸದಾಚಾರ ಪಥ ಹಿಡಿದ ಸೂಳೆ ಸಂಕವ್ವೆಗೆ ಶರಣು, ಶರಣು ಶರಣಾರ್ಥಿ
80. ಹಡಪದ ಅಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
81. ಮಾರಯ್ಯಗಳ ಪುಣ್ಯ ಸ್ತ್ರೀ ಗಂಗಮ್ಮನಿಗೆ ಶರಣು, ಶರಣು ಶರಣಾರ್ಥಿ
82. ಸತ್ಯಸದಾಚಾರದ ಪಥ ಹಿಡಿದ ಮಾಯಿದೇವಿಗೆ ಶರಣು, ಶರಣು ಶರಣಾರ್ಥಿ
83. ನಾಗಲಾಂಬಿಕಾ ಪತಿ ಶಿವದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
84. ಎಳೆವರೆಯದಲ್ಲೇ ಲಿಂಗದೊಡಗೂಡಿದ ಬಾಲ ಸಂಗಯ್ಯನಿಗೆ ಶರಣು, ಶರಣು ಶರಣಾರ್ಥಿ
85. ಕಂಬದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
86. ಕನ್ನಡಿ ಕಾಯಕದ ಅಮ್ಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
87. ಕನ್ನದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
88. ಕರುಳ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
89. ಕಲಕೇತ ಶರಣರಿಗೆ ಶರಣು, ಶರಣು ಶರಣಾರ್ಥಿ
90. ಕಾಮಾಟದ ಭೀಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
91. ಕಿನ್ನರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
92. ಕೀಲಾರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
93. ಕೇದಾರ ಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
94. ಕೂಗಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
95. ಕೊಟಾರದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
96. ಕೋಲ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
97. ಗಜೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
98. ಗಣದಾಸಿ ವೀರಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

99. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
100. ಗೋರಕ್ಷನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
101. ತೆಲಗು ಜೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
102. ಶಿವಲಿಂಗ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
103. ಜೊಕ್ಕಸದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
104. ಗಾಣದ ಕನ್ನಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
105. ಗಾವುದಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
106. ಗುಪ್ತ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
107. ಗುರುಪುರದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
108. ಗುರುಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
109. ಘಟ್ಟಿವಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
110. ಚಂದಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
111. ಜೇಡರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
112. ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
113. ಥಕ್ಕೆಯ್ಯ ಜೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
114. ಗಣಪ್ರಸಾದಿ ಡೋಹರ ಕಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
115. ತಳವಾರ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
116. ತುರುಗಾಹಿ ರಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
117. ತೆಲುಗೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
118. ದಶಗಣ ಸಿಂಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
119. ಅಹಿಂಸಾವಾದಿ ದಸರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
120. ದಾಸೋಹದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
121. ನಗೆಯ ಮಾರಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
122. ನಿಜಗುಣ ಶಿವಯೋಗಿ ಶರಣರಿಗೆ ಶರಣು, ಶರಣು ಶರಣಾರ್ಥಿ
123. ನಿವೃತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
124. ನಿಜಾನುಭಾವಿ ನುಲಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
125. ರೇವಣ ಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
126. ಮಲ್ಲಿಕಾರ್ಜುನ ಪಂಡಿತಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
127. ಮರುಳುಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
128. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
129. ಪ್ರಸಾದಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
130. ಪ್ರಸಾದಿ ಲೆಂಕ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
131. ಬಹುರೂಪಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
132. ಬಳ್ಳೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
133. ಬಾಚಿ ಕಾಯಕದ ಬಸವಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
134. ಬಾಲಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

135. ವಚನಕಾರ ಬಾಲ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
136. ಬಾಹೂರ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
137. ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
138. ಬೊಕ್ಕಸದ ಚಿಕ್ಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
139.ಭರಿತಾರ್ಪಣದ ಚೆನ್ನಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
140.ಭಿಕಾರಿ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
141.ಕೆಂಭಾವಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
142.ಮನಸಂದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
143.ಮನುಮುನಿ ಗುಮ್ಮಟದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
144.ಕಂದಹಾರದ ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
145.ಮಲಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
146.ಮಹಾದೇವೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
147.ಮಳುಬಾವಿಯ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
148.ಮಾದಾರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
149.ಮರುಳುದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
150.ಮಲುಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
151.ಗುರುಕುಲದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
152.ಮಾದಾರ ಧೂಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
153.ಮಾರುಡುಗೆಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
154.ಮಾರೇಶ್ವರೊಡೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
155.ಮೆರೆ ಮಿಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
156.ಮೇದಾರ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
157.ಮೈದುನ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
158.ರಕ್ಕಸ ಬೊಮ್ಮ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
159.ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
160.ರೇಚವ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
161.ಲದ್ದೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
162.ವಚನ ಭಂಡಾರಿ ಶಾಂತರಸ ಶರಣರಿಗೆ ಶರಣು, ಶರಣು ಶರಣಾರ್ಥಿ
163.ವರದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
164.ವೀರ ಗೊಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
165.ವೀರ ಶಂಕರದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
166.ವೇದಮೂರ್ತಿ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
167.ವೈದ್ಯ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
168.ಶಂಕರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
169.ಕಂಬಳಿಯ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
170.ಶಿವನಾಗಮಯ್ಯ ಶರಣರಿಗೆ ಶರಣರಿಗೆ ಶರಣು, ಶರಣು ಶರಣಾರ್ಥಿ

171. ಸಂಗಮೇಶ್ವರದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
172. ಸಕಲೇಶ ಮಾದರಸ ಶರಣರಿಗೆ ಶರಣು, ಶರಣು ಶರಣಾರ್ಥಿ
173. ಸಗರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
174. ಸತ್ತಿಗೆ ಕಾಯಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
175. ಸಿದ್ಧಾಂತಿ ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
176. ಸಿಮ್ಮಲಿಗೆ ವೀರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
177. ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
178. ಸುಂಕದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
179. ಸೂಜಿಕಾಯಕದ ರಾಮಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
180. ಸೊಡ್ಡಳ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
181. ಹಡಪದ ರೇಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
182. ಹಾವಿನ ಹಾಳ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
183. ಹುಂಜಿನ ಕಾಳಗದ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
184. ಹೆಂಡದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
185. ಹೊಡೆಹುಲ್ಲ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
186. ಅಗ್ಘವಣಿಯ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
187. ನಿಜ ವಿರಕ್ತ ನಿರ್ಲಜ್ಜ ಶಾಂತಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
188. ಸಗರದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
189. ನಿಗಮದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
190. ಕಲಕೇತ ಬ್ರಹ್ಮಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
191. ಮೋರನ ವೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
192. ವಾರುಧಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
193. ವೀರಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
194. ನಿಜ ಲಿಂಗ ಚಿಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
195. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
196. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
197. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
198. ಮುಗ್ಧ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
199. ಸದ್ಯೋನ್ಮುಕ್ತ ಶರಣ ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
200. ಸಕಲ ಆದಿಪ್ರಮಥ ಗಣಂಗಳಿಗೆ ಶರಣು, ಶರಣು ಶರಣಾರ್ಥಿ

ಜಯ ಬಸವರಾಜ ಭಕ್ತ ಜನ ಸುರಭೂಜಾ
ಜಯತು ಮಹಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾಸಿಂಧು ಭಜಕ ಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀಗುರು ಬಸವಾ ॥
ರಕ್ಷಿಸು ಶ್ರೀಗುರು ಬಸವಾ ॥

ವಚನಗಳ ಶುದ್ಧೀಕರಣ ಅತ್ಯಗತ್ಯ

-ಮಾತಾಜಿ

ವಚನ ವಾಙ್ಮಯವು ದಾರ್ಶನಿಕ ಸಾಹಿತ್ಯ. ಮೂಲತಃ ಆಧ್ಯಾತ್ಮಿಕ ಮೌಲ್ಯಗಳ ಮೇಲೆ ನಿಂತ ವಚನ ಸಾಹಿತ್ಯವು ಸಮಾಜ ಮುಖಿಯಾಗಿ ಸಮಾಜವನ್ನು ಸರ್ವಾಂಗೀಣವಾಗಿ ಮೇಲೆತ್ತುವ ಕಳಕಳಿ ಉಳ್ಳದು. ಯಾವ ಆಶಯದಿಂದ ಅದು ಮೈದಾಳಿತೋ ಅದು ತನ್ನ ಮೂಲ ಆಶಯದಿಂದ ದೂರ ಸರಿಯುವಂತೆ ಮಾಡಲು ಬಹಳಷ್ಟು ಜನ ಹಸ್ತಕ್ಷೇಪ ಮಾಡಿದ್ದಾರಲ್ಲದೆ ವಚನ ಸಾಹಿತ್ಯವನ್ನು ಕಲುಷಿತಗೊಳಿಸಿದ್ದಾರೆ. ವಂಶ ಶ್ರೇಷ್ಠತೆ ಮುಂತಾದ ವಿಚಾರಗಳು ಬಸವಾದಿ ಪ್ರಮಥರ ಆಲೋಚನೆಗೆ ವಿರುದ್ಧವಾದವು. ಆದರೆ ಅಂಥವನ್ನು ವಚನಗಳಲ್ಲಿ ತೂರಿಸಿ ಅನೇಕರು ವಚನ ಸಾಹಿತ್ಯವನ್ನು ಮಲಿನಗೊಳಿಸಿದ್ದಾರೆ. ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರ ವಚನಗಳಲ್ಲಿ ಇಂಥ ಹಸ್ತಕ್ಷೇಪ ಬಹಳಷ್ಟು ನಡೆದಿದೆ. ಇದಕ್ಕೆ ಕಾರಣ ಹೀಗಿರಬಹುದು.

1. ಚಿನ್ಮಯ ಜ್ಞಾನಿ ಚನ್ನ ಬಸವಣ್ಣನವರು ವಚನ ಸಾಹಿತ್ಯ ಸಂವಿಧಾನ ಕರ್ತ ಶರಣರಲ್ಲಿ ಪ್ರಮುಖರು. ಜೊತೆಗೆ ವಿಚಾರ-ಆಚಾರ ಸಂಹಿತೆಯನ್ನು ಸೂತ್ರೀಕರಿಸಿದ (Codify) ಷಟಸ್ಥಲ ಆಚಾರ್ಯರು. ಗುರು ಬಸವಣ್ಣನವರ ವಚನಗಳಲ್ಲಿ ಸೈದ್ಧಾಂತಿಕ ಸೂತ್ರಗಳು ಪ್ರಮುಖವಾಗಿದ್ದರೆ ಚನ್ನಬಸವಣ್ಣನವರ ವಚನಗಳಲ್ಲಿ ಆಚರಣೆಗೆ ಸಂಬಂಧಪಟ್ಟ ಮಾರ್ಗದರ್ಶನವಿದೆ. ಅಂಥ ವಚನಗಳಲ್ಲಿ ತಪ್ಪು ಆಚರಣೆಗಳನ್ನು ಸೇರಿಸಿ ಅವುಗಳಿಗೆ ಅಧಿಕೃತತೆಯ ಮುದ್ರೆ ಒತ್ತುವ ಪ್ರಯತ್ನವಿದೆ.

2. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ರಚಿಸಿದ ಗೀತೆಗಳಲ್ಲಿ ಪದ್ಯದ ಬಿಗಿ, ಛಂದಸ್ಸು ಇದೆಯಾದರೂ ಅವರ ವಚನಗಳಲ್ಲಿ ಗದ್ಯದ ಸಡಿಲತೆಯನ್ನು ಕಾಣುತ್ತೇವೆ. ಹೀಗಾಗಿ ಹಸ್ತಕ್ಷೇಪ ಮಾಡುವವರಿಗೆ ಹೆಚ್ಚು ಸುಲಭ ಸಾಧ್ಯತೆ ಇದೆ.

ಇಂಥ ಕೆಲವು ವಚನಗಳನ್ನು ಓದಿದಾಗ ಮೊದ ಮೊದಲು ಗಾಬರಿಯಾಗುತ್ತಿತ್ತು. ಆದಿ ಶರಣರು ಹೀಗೆ ಹೇಳಲು ಸಾಧ್ಯವೆ ? ಎಂದು ಶಂಕೆ ಮೂಡುತ್ತಿತ್ತು. ನಂತರ ಅರ್ಥವಾಗತೊಡಗಿತು. ಸ್ವಾರ್ಥಿಗಳು, ಧೂರ್ತರ ಹಸ್ತಕ್ಷೇಪದಿಂದ ಇಂಥ ವೈರುಧ್ಯದ ವಿಚಾರಗಳು ವಚನ ಸಾಹಿತ್ಯದಲ್ಲಿ ಸೇರಿವೆ ಎಂಬುದಾಗಿ. ಮತ್ತು ಸದ್ಯ ಪ್ರಕಟವಾಗಿರುವಂತೆ ವಚನ ಸಾಹಿತ್ಯವನ್ನು ಓದಿದ್ದೇ ಆದರೆ ಆದಿ ಶರಣರ ಆದರ್ಶ, ಆಶಯದ ಬಗೆಯೇ ಸಂದೇಹ, ತಿರಸ್ಕಾರ ಉಂಟಾಗದಿರದು. ವಚನ ಸಾಹಿತ್ಯದ ಬಗ್ಗೆ ಶ್ರೀ ಪಿ.ವಿ.ನಾರಾಯಣರಂತಹವರು (ಉದಾ:ಧರ್ಮಕಾರಣ) ಅಂತಹ ವಚನಗಳನ್ನು ಇಟ್ಟುಕೊಂಡೇ ಶರಣರು ಜಾತಿವಾದಿಗಳು ಎಂಬುದಾಗಿ ಬಿಂಬಿಸಲು ಪ್ರಯತ್ನಿಸುತ್ತಾರೆ. ಈ ರೀತಿಯ ಕೆಲವು ವಚನ ಕುರಿತು ವಿಮರ್ಶಿಸೋಣ.

1. ಶ್ರೀಗುರುವಾದಾತನು ಸಕಲಾಗಮಂಗಳ ಹೃದಯವನರಿದು.
ತನ್ನ ತಾನರಿದು ಸರ್ವಾಚಾರ ತನ್ನಲ್ಲಿ ನೆಲೆಗೊಂಡು,
ಉಪದೇಶವ ಮಾಡುವ ಕ್ರಮವೆಂತೆಂದಡೆ:
ಬ್ರಾಹ್ಮಣನ ಮೂರು ವರುಷ ನೋಡಬೇಕು;
ವೈಶ್ಯನ ಒಂಭತ್ತು ವರುಷ ನೋಡಬೇಕು:
ಶೂದ್ರನ ಹನ್ನೆರಡು ವರುಷ ನೋಡಬೇಕು;
ನೋಡಿದಲ್ಲದೆ ದೀಕ್ಷೆಯ ಕೊಡಲಾಗದು.

ವೀರಾಗಮೇ :
ಬ್ರಾಹ್ಮಣಂ ತ್ರೀಣಿ ವರ್ಷಾಣಿ ಷಡಬ್ದಂ ಕ್ಷತ್ರಿಯಂತಥಾ।
ವೈಶ್ಯಂ ನವಾಬ್ದಮಾಖ್ಯಾತಂ ಶೂದ್ರಂ ದ್ವಾದಶವರ್ಷಕಂ॥
ಈ ಕ್ರಮವನರಿಯದೆ ಉಪಾಧಿವಿಡಿದು ಉಪದೇಶವ ಮಾಡುವಾತ ಗುರುವಲ್ಲ.
ಉಪಾಧಿವಿಡಿದು ಉಪದೇಶವ ಮಾಡಿಸಿಕೊಂಬಾತ ಶಿಷ್ಯನಲ್ಲ.

ಇವರಿಬ್ಬರ ನಿಲವು ಒಂದೆ: ತಕ್ಕನ ಮನೆಗೆ ಠಿಕ್ಕ ಬಿದ್ದಿನ ಬಂದಂತೆ!
ಈ ಗುರುಶಿಷ್ಯರಿಬ್ಬರನು ರೌರವನರಕದಲ್ಲಿಕ್ಕುವ ಕೂಡಲಚನ್ನ ಸಂಗಮದೇವ ॥
- ಚನ್ನ ಬಸವಣ್ಣನವರ ವಚನ - 633

ಎಷ್ಟು ಲಜ್ಜೆಗೇಡಿತನದಿಂದ ವಚನಗಳಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎಂಬುದಕ್ಕೆ ಈ ವಚನವನ್ನು ಉದಾಹರಿಸಬಹುದು. ಈ ವಚನದಲ್ಲಿ ಆಗಮ ಪ್ರಮಾಣವನ್ನು ಪ್ರಾರಂಭದಲ್ಲಿ ಉಲ್ಲೇಖಿಸಲಾಗಿದೆ. ಗುರು ಬಸವಣ್ಣನವರು ವೈದಿಕ ಧರ್ಮದ ನೆರಳಿನಲ್ಲಿ ಸಾಗಿದ "ಆಗಮಗಳ ಮೂಗ ಕೊಯ್ವೆ ಎಂದರು." ದೀಕ್ಷೆ ಮಾಡುವಾಗ "ಬ್ರಾಹ್ಮಣನನ್ನು ಮೂರು ವರ್ಷ, ಕ್ಷತ್ರಿಯನನ್ನು ಆರು ವರ್ಷ, ವೈಶ್ಯನನ್ನು ಒಂಭತ್ತು ವರ್ಷ, ಶೂದ್ರನನ್ನು 12 ವರ್ಷ ಪರೀಕ್ಷಿಸಿ ನೋಡಬೇಕು. ಹಾಗೆ ನೋಡಿದಲ್ಲದೆ ದೀಕ್ಷೆ ಕೊಡಬಾರದು" ಎಂದು ಹೇಳಲಾಗಿದೆ. ಇದು ಬಸವಾದಿ ಪ್ರಮಥರ ವಿಚಾರಧಾರೆಯೇ ಅಲ್ಲ. ಸ್ಪಷ್ಟವಾಗಿ ವೀರಾಗಮದ ವಿಚಾರಧಾರೆ. ಈ ವಚನದಲ್ಲಿ ಅಸ್ಪೃಶ್ಯರ ಪ್ರಸ್ತಾಪವೇ ಇಲ್ಲ. ಬಸವಾದಿ ಪ್ರಮಥರು ಅಸಂಖ್ಯಾತ ಅಸ್ಪೃಶ್ಯರಿಗೆ ದೀಕ್ಷಾ ಸಂಸ್ಕಾರ ನೀಡಿದರು. ಮತ್ತು ಶೂದ್ರ ಜನಾಂಗದಲ್ಲಿ ಹುಟ್ಟಿದ ಅಸಂಖ್ಯಾತರಿಗೆ ದೀಕ್ಷೆ ನೀಡಿ ಅವರನ್ನು ಶರಣರನ್ನಾಗಿ ಮಾಡಿದರು. ಅಂದಾಗ ಈ ವಚನವು ವರ್ಣಾಶ್ರಮ ವ್ಯವಸ್ಥೆಯನ್ನು ಪುನಃ ಗಟ್ಟಿಗೊಳಿಸಲು ಧೂರ್ತರು ಸೇರಿಸಿದ ವಚನ ಎಂಬುದು ಸ್ಪಷ್ಟವಾಗುವುದು ಮತ್ತು ಇದೇ ಬಸವ ಪೂರ್ವದ ವೀರಶೈವ ಪಂಥದ ಆಚರಣೆ ಎಂಬುದು ಸಹ ಸಿದ್ಧವಾಗುತ್ತದೆ.

2. ಪುಣ್ಯತೀರ್ಥಕ್ಷೇತ್ರಂಗಳಲ್ಲಿ ತಂದ ಶಿಲೆಯ ಪರೀಕ್ಷಿಸಿ ಸಂಸ್ಕಾರಂಗೈಯಲು.
ಅದು ಲಿಂಗವಾಗಿಪ್ಪುದಯ್ಯಾ.
ಸದ್ವಂಶೀಯರಾದ ವಟುಗಳ ಪರೀಕ್ಷಿಸಿ ಸಂಸ್ಕಾರಂಗೈಯಲು,
ಗುರುಜಂಗಮವಾಗಿರ್ಪರಯ್ಯಾ.
ಇಂತಹುದನಾರಯ್ಯದೆ, ಸಂಸ್ಕಾರವಿರಹಿತ ಗುರುಲಿಂಗಜಂಗಮವ ಪೂಜಿಸುವ
ಅರೆಮರುಳರನೆನಗೊಮ್ಮೆ ತೋರದಿರಯ್ಯಾ,
ಕೂಡಲಚನ್ನಸಂಗಮದೇವಾ. - ಚನ್ನಬಸವಣ್ಣ - 418

ಈ ವಚನದ ಭಾವಾರ್ಥ ಹೀಗಿದೆ. ಕಾಶಿ, ಶ್ರೀಶೈಲ ಮುಂತಾದ ಪುಣ್ಯಕ್ಷೇತ್ರಗಳಿಂದ ತಂದ ಶಿಲೆಗೆ ಸಂಸ್ಕಾರ ನೀಡಿದಾಗ ಲಿಂಗವಾಗಿ ಪೂಜೆಗೆ ಅರ್ಹವಾಗುತ್ತದೆ. "ಅದೇ ರೀತಿ ಸದ್ವಂಶೀಯರಾದ ವಟುಗಳನ್ನು ಪರೀಕ್ಷಿಸಿ ಸಂಸ್ಕಾರ ಕೊಡಲು ಅವರು ಗುರು ಜಂಗಮರಾಗುವರು. ಇದನ್ನು ತಿಳಿಯದೆ ಸಂಸ್ಕಾರವಿಲ್ಲದ ಗುರು ಜಂಗಮರನ್ನು ಪೂಜಿಸುವವರು ಅರೆ ಮರುಳರು."

ಈ ವಚನವು ಶರಣರ ವಿಚಾರಧಾರೆಗೆ ಪೂರ್ತಿ ಬೇರೆಯಾಗಿದೆ. ಬಸವಾದಿ ಪ್ರಮಥರು ಯಾವುದೇ ತೀರ್ಥಕ್ಷೇತ್ರವನ್ನು ಕೇವಲ ಇರುವಿಕೆಯಿಂದಲೇ ಪುಣ್ಯಕ್ಷೇತ್ರ ಎನ್ನುವುದಿಲ್ಲ; ಆ ಪುಣ್ಯಕ್ಷೇತ್ರದ ಶಿಲೆಯೇ ಪವಿತ್ರ ಎನ್ನುವುದಿಲ್ಲ ಯಾವ ಕಲ್ಲಾದರೇನು ಅದಕ್ಕೆ ಕಲ್ಲುಕುಟಿಗ, ಕಂತೆಯವ ಆಕಾರಕೊಡುವರು. ಗುರುವು ಚಿತ್ಕಳೆ ತುಂಬುವನು. ಆಗ ಅದು ಪೂಜ್ಯವಾಗುವುದು ಎನ್ನುವರು. ಅದೇ ರೀತಿ ಸದ್ವಂಶ ಎನ್ನುವ ಪದವನ್ನೇ ಅಲ್ಲಗಳೆಯುವರು. ಒಬ್ಬ ಕೊಲೆಗಡುಕನ ಮನೆಯಲ್ಲಿ ಮಹಾತ್ಮ ಹುಟ್ಟಬಹುದು. ಒಬ್ಬ ಧರ್ಮವಂತನ ಹೊಟ್ಟೆಯಲ್ಲಿ ದುಷ್ಟನೇ ಹುಟ್ಟಬಹುದು. ಸಂಸ್ಕಾರ ಮುಖ್ಯವಾದುದೇ ವಿನಾ ವಂಶವಲ್ಲ. ಅದೂ ಸಂಸ್ಕಾರವೆಂದರೆ ಅಂತರಂಗದಿಂದ ಮೂಡಿಬರುವ ಜ್ಞಾನಾತ್ಮಕ ಸಂಸ್ಕಾರ. ವೈದ್ಯನಾದವನು ಬಿಳಿಯಕೋಟು ಹಾಕಬೇಕೆ ವಿನಾ ಬಿಳಿಯ ಕೋಟು ಹಾಕಿದವರೆಲ್ಲ ವೈದ್ಯರಲ್ಲ. ನ್ಯಾಯವಾದಿ ಅದಕ್ಕೆ ತಕ್ಕ ಅರ್ಹತೆ ಪಡೆದು ಕರಿಯ ಕೋಟನ್ನು ಹಾಕಬೇಕೆ ವಿನಾ, ಅರ್ಹತೆಯಿಲ್ಲದೆ ಕರಿಯ ಕೋಟನ್ನು ಹಾಕಿದವರೆಲ್ಲ ವಕೀಲರಲ್ಲ. ಹಾಗೆ ಅರಿವಿನಿಂದ ಗುರುವಾಗಿ, ಅನುಭಾವದಿಂದ ಜಂಗಮವಾಗಿ ವ್ಯಕ್ತಿಯು ಲಾಂಛನವನ್ನು ಹಾಕಬೇಕೇ ವಿನಾ ಲಾಂಛನ ಹಾಕಿದ ಮಾತ್ರಕ್ಕೇ ಗುರು ಜಂಗಮರೂ ಅಲ್ಲ.

ತೀರಾ ಇತ್ತೀಚಿನವರೆಗೂ ಎಲ್ಲರೂ ಗುರು-ಜಂಗಮ-ಮಠಾಧಿಕಾರಿಗಳಾಗುವ ಸತ್‌ಸಂಪ್ರದಾಯ ಲಿಂಗಾಯತ ಸಮಾಜದಲ್ಲಿದ್ದಿತು. ಜಾತಿ ಹಿಡಿದು ಗುರು-ಜಂಗಮರನ್ನು ಮಾಡುವ, ಬಸವ ಪಥಕ್ಕೆ ಹೊರತಾದ ಆಚರಣೆ ಈ ವಚನದಲ್ಲಿರುವುದರಿಂದ ಬಹುಶಃ ಶಿವಯೋಗ ಮಂದಿರ ರಚನೆಯಾದ ಮೇಲೆ ಬರೆಯಲ್ಪಟ್ಟ ವಚನವಿದಾಗಿರಬೇಕು ಎಂದೂ ಊಹಿಸಬಹುದು.

3. ತೆಂಗಿನೊಳಗಣ ತಿರುಳು ಸೇವಿಸಬರ್ಪುದಲ್ಲದೆ,
ಹೊರಗಣ ಪರಟೆ ಸೇವಿಸಲು ಬಾರದು.
ಚಾಂಡಾಲಂಗೆ ಜ್ಞಾನವಂಕುರಿಸಿದಡೆ
ಆತನ ಅಂತರಂಗದ ವೃತ್ತಿಗೆ ಪೂಜ್ಯತೆಯಲ್ಲದೆ
ಬಹಿರಂಗದ ತನುವಿಗೆ ಪೂಜ್ಯತೆಯಾಗದು.
ಒಳಹೊರಗೆಂಬ ಭೇದವಿಲ್ಲದೆ ಸೇವಿಸಲುಚಿತವಪ್ಪಂತೆ
ಶಿವಕುಲಪ್ರಸೂತಂಗೆ ಶಿವಜ್ಞಾನವಾಗಲು,
ಆತನ ತನುವೃತ್ತಿಗಳೆರಡೂ ಸೇವ್ಯವಾಗಿರ್ಪವು.
ಇಂತಿದು ಸಾಧಕರ ಸ್ಥಿತಿಯಯ್ಯಾ ಕೂಡಲಚನ್ನಸಂಗಮದೇವಾ! - ಚನ್ನಬಸವಣ್ಣ - 97

ತೆಂಗಿನಕಾಯಿಯೊಳಗಣ ತಿರುಳನ್ನು ಸೇವಿಸುವರು, ಹೊರಗಿನ ಪರಟೆಯನ್ನು ಯಾರೂ ಸೇವಿಸರು. ಹಾಗೆ ಅಸ್ಪೃಶ್ಯನಲ್ಲಿ ಜ್ಞಾನವು ಉದಿಸಿದರೆ, ಅವನ ಜ್ಞಾನಕ್ಕೆ ಬೆಲೆ ಕೊಡಬಹುದೇ ವಿನಾ ಅವನ ಶರೀರ ಪೂಜ್ಯವಲ್ಲ. ಉತ್ತಮ ಕುಲದಲ್ಲಿ ಹುಟ್ಟಿದವನಿಗೆ ಜ್ಞಾನವುಂಟಾದಾಗ ಆತನ ತನು ಪೂಜ್ಯ, ಜ್ಞಾನ ಗ್ರಹಣೀಯ! ಇದೂ ಕೂಡ ಬಸವಾದಿ ಪ್ರಮಥರ ವಿಚಾರಕ್ಕೆ ವಿರುದ್ಧವಾದುದು. ಏಕೆಂದರೆ ಜ್ಞಾನಿಯು ಯಾರಾದರೇನು ಅವನ ಜ್ಞಾನವನ್ನು ಪಡೆದುಕೊಳ್ಳುವುದು ಮಾತ್ರವಲ್ಲ, ಅವನನ್ನು ಪೂಜಿಸಬೇಕು ಎಂಬುದನ್ನು ಧರ್ಮಪಿತರು "ದಾಸೀಪುತ್ರನಾಗಲೀ, ವೇಶ್ಯಾಪುತ್ರನಾಗಲಿ" ಎಂಬ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ. ಅಂದಾಗ ಚನ್ನಬಸವಣ್ಣನವರು ತಮ್ಮ ದೀಕ್ಷಾ ಗುರು ಮತ್ತು ಧರ್ಮಗುರು ಎರಡೂ ಆದ ಬಸವಣ್ಣನವರ ವಿಚಾರ ಧಾರೆಯನ್ನು ಅಲ್ಲಗಳೆಯುವರೆ? ಇಂಥವೆಲ್ಲ ಜಾತಿವಾದಿಗಳು, ವಂಶವಾದಿಗಳೂ ಆದ ಪುರೋಹಿತವರ್ಗದವರು ಮಾತ್ರ ಆಡಬಹುದಾದ ಮಾತುಗಳು.

ಇಂತಹ ಧೂರ್ತರು ತಮ್ಮ ಸ್ವಾರ್ಥಸಾಧನೆಗಾಗಿ, ಅಸಭ್ಯ, ಅಸಹ್ಯ ಆಚರಣೆಗಳಿಗೆ ಮಾನ್ಯತೆಯ ಮುದ್ರೆ ಒತ್ತಿಸಿಕೊಳ್ಳಲೋಸುಗ ಎಂತೆಂತಹ ಮಾತುಗಳನ್ನು ಸೇರಿಸಿದ್ದಾರೆಂಬುದನ್ನು ಮುಂದಿನ ವಚನದಲ್ಲಿ ಕಾಣಬಹುದು.

4. ಅಂಗದ ಮೇಲೆ ಲಿಂಗ ಸಾಹಿತ್ಯವುಳ್ಳ ಭಕ್ತನು
ಜಂಗಮಕ್ಕೆ ಜಳಕವ ಮಾಡಿಸದೆ ತಾ ಜಳಕವ ಮಾಡಿದನಾದಡೆ
ಬಚ್ಚಲ ನೀರ ತೊಳೆದು ಕೊಂಡ ಸಮಾನ.
ಜಂಗಮಕ್ಕೆ ವಸ್ತ್ರವ ಹೊದಿಸದೆ ತಾ ಹೊದ್ದನಾದಡೆ,
ನಾಯ ತೊಗಲ ಉಟ್ಟು ಹೊದ್ದ ಸಮಾನ.
ಜಂಗಮಕ್ಕೆ ಸುಗಂಧ ದ್ರವ್ಯಂಗಳ ಲೇಪನವ ಮಾಡದೆ,
ತಾ ಲೇಪಿಸಿ ಕೊಂಡನಾದಡೆ, ಅಮೇಧ್ಯವ ಹೂಸಿಕೊಂಡ ಸಮಾನ.
ಜಂಗಮಕ್ಕೆ ಅಕ್ಷತೆಯನಿಡದೆ ತಾನಿಟ್ಟುಕೊಂಡನಾದಡೆ,
ಹೆಣನ ಹಣೆಯಕ್ಕಿಯನಿಟ್ಟುಕೊಂಡ ಸಮಾನ,
ಜಂಗಮಕ್ಕೆ ಪುಷ್ಪವ ತುರುಬದೆ ತಾ ತುರುಬಿಕೊಂಡನಾದಡೆ,
ಪಕ್ಷಿಗಳ ಪಕ್ಕವ ತುರುಬಿಕೊಂಡ ಸಮಾನ.
ಜಂಗಮಕ್ಕೆ ಧೂಪಾರತಿಯ ಮಾಡದೆ, ತಾ ಮಾಡಿ ಕೊಂಡನಾದಡೆ,

ಹೆಣನ ಹೊಗೆಯ ಕೊಂಡ ಸಮಾನ.
ಜಂಗಮಕ್ಕೆ ದೀಪಾರತಿಯ ಬೆಳಗದೆ ತಾ ನಿವಾಳಿಸಿಕೊಂಡನಾದಡೆ,
ಸತ್ತ ಹೆಣಕೆ ನಿವಾಳಿಯನೆತ್ತಿಕೊಂಡ ಸಮಾನ.
ಜಂಗಮಕ್ಕೆ ಆರೋಗಣೆಯ ಮಾಡಿಸದೆ ತಾನುಂಡನಾದಡೆ,
ಕಿಲ್ಬಿಷವಕೊಂಡ ಸಮಾನ.
ಜಂಗಮಕ್ಕೆ ಅಮೃತಪಾನಂಗಳ ಕೊಡದೆ ತಾ ಕುಡಿದನಾದಡೆ.
ಸುರಾಪಾನವ ಮಾಡಿದ ಸಮಾನ.
ಜಂಗಮಕ್ಕೆ ಹಸಪ್ರಕ್ಷಾಲನವ ಮಾಡಿಸದೆ
ತಾ ಕೈಯ ತೊಳೆದು ಮುಕ್ಕುಳಿಸಿದನಾದಡೆ,
ರಕ್ತದಲ್ಲಿ ತೊಳೆದು ಮುಕ್ಕುಳಿಸಿದ ಸಮಾನ.
ಜಂಗಮಕ್ಕೆ ತಾಂಬೂಲವ ಕೊಡದೆ ತಾ ವೀಳೆಯವ ಮಾಡಿದೊಡೆ
ತ್ರಿಭಂಗಿಯ ಕೊಂಡ ಸಮಾನ.
ಜಂಗಮಕ್ಕೆ ಸುಖಾಸನವ ನಿಕ್ಕದೆ ತಾ ಗದ್ದುಗೆಯ ಮೇಲೆ ಕುಳ್ಳಿರ್ದನಾದಡೆ,
ಬಂದಿಕಾನದಲ್ಲಿ ಕುಳ್ಳಿರ್ದ ಸಮಾನ.
ಜಂಗಮಕ್ಕೆ ಸರ್ವಾಭರಣವನಿಕ್ಕದೆ ತಾನಿಕ್ಕಿ ಕೊಂಡನಾದಡೆ,
ಕರ- ಶಿರ-ಚರಣದಲ್ಲಿ ಸಂಕಲೆಯನಿಕ್ಕಿ ಕೊಂಡ ಸಮಾನ.
ಜಂಗಮಕ್ಕೆ ಅಂದಳ, ಕುದುರೆ ಮೊದಲಾದ ವಾಹನಂಗಳ ಕೊಡದೆ
ತಾನೇರಿ ಕೊಂಡನಾದಡೆ ವಿಮಾನದ ಮೇಲಣ ಹೆಣನ ಸಮಾನ.
ಜಂಗಮಕ್ಕೆ ಸ್ತೋತ್ರ ಮಂತ್ರ ಗೀತೆ ವಾದ್ಯ ನೃತ್ಯಂಗಳ ಕೇಳಿಸದೆ
ತಾ ಕೇಳಿದನಾದಡೆ, ದುಶ್ಶಬ್ದ ದುರ್ನಾದವ ಕೇಳಿದ ಸಮಾನ.
ಚಿತ್ರ ವಿಚಿತ್ರ ವಿನೋದದಾಟವನು ಜಂಗಮ ಮುಂತಾಗಿ ನೋಡಿಸದೆ
ತಾ ನೋಡಿದನಾದಡೆ ತೊಗಲ ಬೊಂಬೆಯ ನೋಡಿದ ಸಮಾನ.
ಜಂಗಮಕ್ಕೆ ಕನ್ಯಾ ಸ್ತ್ರೀಯ ವಿವಾಹವ ಮಾಡಿ ಅವರಿಗೆ ರತಿಸುಖವ ಕೊಡದೆ
ತಾ ಮದುವೆಯಾಗಿ ಸತಿ ಸಂಯೋಗವ ಮಾಡಿದನಾದಡೆ ,
ಮಾತೃಸಂಯೋಗವ ಮಾಡಿದ ಸಮಾನ .
ಜಂಗಮಕ್ಕೆ ಗೃಹವ ಕಟ್ಟಿಸಿ ಕೊಡದೆ ತಾ ಗೃಹದೊಳಗಿರ್ದನಾದಡೆ,
ನರಕದ ಕುಳಿಯೊಳಗಿರ್ದ ಸಮಾನ.
ಇಂತೀ ಸಕಲಭೋಗಾದಿಭೋಗಂಗಳನು ಜಂಗಮಕ್ಕೆ ಅರ್ಪಿಸದೆ
ತಾನು ಲಿಂಗ ಸಾಹಿತ್ಯವುಂಟೆಂದು ಕೊಂಡನಾದಡೆ,
ಆತಂಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವಿಲ್ಲ.
ಅವ ಸರ್ವಾಪರಾಧಿಯಯ್ಯಾ
ಆವಂಗೆ ಸಹಜ ಭಕ್ತಿ ಸಮಭಾಜನವಿಲ್ಲವಾಗಿ,
ನಿಜ ಮುಕ್ತಿ ಎಂದಿಗೂ ಇಲ್ಲವಯ್ಯಾ,
ಕೂಡಲ ಚೆನ್ನ ಸಂಗಮದೇವಾ!

-ಚ.ಬ.ವ . 269

ಇಂಥ ವಚನಗಳು ಹಲವಾರು ಶರಣ-ಶರಣೆಯರಲ್ಲಿ ಬರುತ್ತವೆ. ಒಂದು ವೇಳೆ ಗೃಹಸ್ಥರಾದ ಶರಣ-ಶರಣೆಯರಲ್ಲಿಬಂದರೆ ಏನಾದರೊಂದು ಬಗೆಯ ಅರ್ಥ ಮಾಡಬಹುದು. ಉಡುವ ವಸ್ತ್ರ, ಉಣ್ಣುವ ಅನ್ನ, ಇರುವ ಮನೆ ಹೀಗೆ ಎಲ್ಲವೂ ಪ್ರಸಾದವಾಗಿವೆ. ಒಂದು ದೃಷ್ಟಿಯಿಂದ ವಿಚಾರ ಮಾಡಿದರೆ ಇವು

ಸಮಷ್ಟಿ ಪ್ರಜ್ಞೆಯ ಅದ್ಭುತ ವಚನಗಳು, ನಿಸ್ವಾರ್ಥದ ಗೌರಿ ಶಂಕರ ! ಹೇಗೆಂದರೆ, ಭಕ್ತ =ವ್ಯಕ್ತಿ, ಜಂಗಮ =ಸಮುದಾಯ - ಸಮಷ್ಟಿ. ಭಕ್ತನು ಸುತ್ತಲಿನ ಜಂಗಮ (ಸಮಾಜ)ವನ್ನು ಕಡೆಗಣಿಸಿ ತನಗೆಂದು ಯಥೇಚ್ಛ ಬಟ್ಟೆ, ಒಡವೆ, ಹಣ ಕೂಡಿ ಹಾಕಿಕೊಂಡರೆ ಆದೀತೇ ? ತಾನು ಅವುಗಳನ್ನು ಹೊಂದುವ ಮುನ್ನ ಇನ್ನಿತರರಿಗೂ ಬಟ್ಟೆ ಇದೆಯೊ ? ಅವನಿಗೂ ಹೊಟ್ಟೆ ತುಂಬಾ ಅನ್ನವಿದೆಯೊ ? ಇರಲು ಮನೆ ಇದೆಯೊ ? ಹೀಗೆ ಜಂಗಮವನ್ನು ಕುರಿತು ಚಿಂತಿಸಬೇಕು. ಯಾರು ಏನಾದರೇನು ಎಂದು ತಾನಷ್ಟೇ ಬೆಳೆದರೆ, ಸುಖಪಟ್ಟರೆ ಆಗದು. ಮನೆಗೆ ಯಾರಾದರೂ ಮಹಾತ್ಮರು, ಅತಿಥಿಗಳು(ಜಂಗಮ) ಬಂದಾಗ ತಾನಷ್ಟೇ ಸ್ನಾನ ಮಾಡಿ, ಪೂಜೆ ಮಾಡಿ, ಉಂಡು ಅವರನ್ನು ಮರುಗಿಸುತ್ತ ಕೂಡ್ರಿಸಬೇಕೊ? ಇಲ್ಲ. ಮನೆಯೊಡೆಯ ಭಕ್ತ, ಬಂದಿರುವ ವ್ಯಕ್ತಿ ಜಂಗಮ. ಮೊದಲು ಅವನ ಸ್ನಾನ - ಪೂಜೆ - ಪ್ರಸಾದ ಯೋಗಕ್ಷೇಮ ನೋಡಬೇಕು. ನೋಡಿ ಎಷ್ಟು ಉದಾತ್ತವಾಗಿದೆ ಈ ಬಗೆಯ ಚಿಂತನೆ, ಪರಹಿತ ಚಿಂತನೆ. ಶಿಷ್ಟಾಚಾರ, ಸಮಷ್ಟಿಪ್ರಜ್ಞೆ ಬಹಳ ಶ್ಲಾಘನೀಯವಾಗಿವೆ. ಈ ವಚನಗಳಿಗೆ ಅರ್ಥ ಮಾಡುವಾಗ ಜಂಗಮ ಎಂದರೆ ಸಮಾಜ ಎಂದು ಇಟ್ಟುಕೊಂಡು ವಚನಕಾರರು ಬರೆದಿದ್ದಾರೆ ಎಂದು ವಿವರಿಸಿದರೆ ಸಮಸ್ಯೆಯಿಲ್ಲ. ಹಾಗಲ್ಲದೆ, ವಿರಕ್ತರಾದ ಚನ್ನಬಸವಣ್ಣನವರ ಹೆಸರಿನಲ್ಲಿ ಮುದ್ರಣಗೊಂಡ ಈ ವಚನ ನೋಡಿರಿ.

5. ಎನ್ನ ನೇತ್ರದಾಹಾರವ ಜಂಗಮಕ್ಕೆ ನೋಡಿಸಿದಲ್ಲದೆ
ನಾನು ನೋಡಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನ ಶ್ರೋತ್ರದಾಹಾರವ ಜಂಗಮಕ್ಕೆ ಕೇಳಿಸಿದಲ್ಲದೆ
ನಾನು ಕೇಳಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನ ಘ್ರಾಣದಾಹಾರವ ಜಂಗಮಕ್ಕೆ ವಾಸಿಸಿದಲ್ಲದೆ
ನಾನು ವಾಸಿಸಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನ ಜಿಹ್ವೆಯಾಹಾರವ ಜಂಗಮಕ್ಕೆ ಉಣಿಸಿದಲ್ಲದೆ
ನಾನು ಭುಂಜಿಸಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನ ಸ್ಪರ್ಶನಾಹಾರವ ಜಂಗಮಕ್ಕೆ ಮುಟ್ಟಿಸದೆ
ನಾನು ಮುಟ್ಟಿದೆನಾದೆಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನಂಗದಾಹಾರ ಸ್ತ್ರೀಯನು ಜಂಗಮಪ್ರಸಾದವೆಂದು ಭಾವಿಸದೆ
ನಾನು ಸ್ತ್ರೀಯ ಸಂಯೋಗವ ಮಾಡಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಎನ್ನಂಗದಾಹಾರ ಮಂಚಸುಪ್ಪತ್ತಿಗೆಯ ಜಂಗಮಕ್ಕೆ ಕೊಡದೆ
ನಾನು ಮಂಚಸುಪ್ಪತ್ತಿಗೆಯ ಮೇಲೆ ಮಲಗಿದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನಂಗದಾಹಾರ ಗದ್ದುಗೆಯನು ಜಂಗಮಕ್ಕೆ ಕೊಡದೆ
ನಾನು ಗದ್ದುಗೆಯ ಮೇಲೆ ಕುಳಿತೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನಂಗದಾಹಾರ ಗೃಹವನು ಜಂಗಮಕ್ಕೆ ಕೊಡದೆ
ನಾನು ಮನೆಯೊಳಗೆ ಇದ್ದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನಂಗದಾಹಾರ ಆಭರಣಂಗಳನು ಜಂಗಮಕ್ಕೆ ತೊಡಿಸದೆ
ನಾನು ತೊಟ್ಟೆದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಎನ್ನಂಗದಾಹಾರ ಆನೆ ಕುದುರೆ ದಂಡಿಗೆಯನು ಜಂಗಮಕ್ಕೆ ಕೊಡದೆ

ನಾನು ಏರಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಎನ್ನಂಗದಾಹಾರ ಚರಣರಕ್ಷೆಯನು ಜಂಗಮಕ್ಕೆ ಮೆಟ್ಟಿಸದೆ
ನಾನು ಮೆಟ್ಟಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಎನ್ನಂಗದಾಹಾರ ಒತ್ತಿಸಿಕೊಂಬಲ್ಲಿ ಜಂಗಮಕ್ಕೆ ಒತ್ತಿಸಡೆ
ನಾನು ಒತ್ತಿಸಿಕೊಂಡೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ !

"ಎನ್ನಂಗದಾಹಾರ ಸ್ತ್ರೀಯನು ಜಂಗಮ ಪ್ರಸಾದವೆಂದು ಭಾವಿಸದೆ ನಾನು ಸ್ತ್ರೀಯ ಸಂಯೋಗವ ಮಾಡಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ," ವಿರಕ್ತರಾದ ಚನ್ನಬಸವಣ್ಣ ಈ ಮಾತುಗಳನ್ನು ಆಡಲು ಸಾಧ್ಯವೆ? ಇದೇ ರೀತಿಯ ವಚನಗಳು ಜಗನ್ಮಾತಾ ವೀರವಿರಾಗಿಣಿ ಅಕ್ಕಮಹಾದೇವಿಯ ಹೆಸರಲ್ಲಿ, ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರ ಹೆಸರಿನಲ್ಲಿ ಸಹ ಬಂದಿವೆ.

ಜಂಗಮ ಎಂದರೆ ವಿರಕ್ತ, ಸನ್ಯಾಸಿ. ಅವನಿಗೆ ಸ್ತ್ರೀಯನ್ನು ಕೊಡಲು ಸಾಧ್ಯವೆ? ನೈತಿಕ ಪರಿಶುದ್ಧಿಗೆ ಅತಿ ಹೆಚ್ಚಿನ ಮಹತ್ವಕೊಟ್ಟ ಬಸವಾದಿ ಪ್ರಮಥರು ಇಂಥ ಹೀನ ಆಚರಣೆಗೆ ಒಪ್ಪಿಗೆ ನೀಡುವುದುಂಟೆ?

"ಹರಿವ ಹಾವಿಂಗಂಜೆ, ಉರಿಯ ನಾಲಿಗೆಗಂಜೆ
ಸುರಗಿಯ ಮೊನೆಗಂಜೆ,
ಒಂದಕ್ಕಂಜುವೆ, ಒಂದಕ್ಕಳುಕುವೆ
ಪರಧನ - ಪರಸ್ತ್ರೀ ಎಂಬ ಜೂಬಿಂಗಂಜುವೆ"

ಎಂದು ಹೇಳಿ, ಗೃಹಸ್ಥನು ಸಹ ಪರಸ್ತ್ರೀಗೆ ಎಳಸಬಾರದು ಎಂದು ಬೋಧೆ ಮಾಡಿರುವಾಗ ಇನ್ನು ವೈರಾಗ್ಯದ ಅಗ್ನಿ ಕುಂಡವಾದ ವಿರಕ್ತ ಜಂಗಮನಿಗೆ ಸ್ತ್ರೀಯನ್ನು ಕೊಡು ಎಂದು ಹೇಳುವುದುಂಟೆ?

ಅಲ್ಲಮ ಪ್ರಭು ದೇವರು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ :

ನಿಂದಡೆ ಹೊನ್ನು - ಹೆಣ್ಣು - ಮಣ್ಣು ಹಿಡಿದು
ನೆಟ್ಟನೆ ಭಕ್ತನಾಗಿ ನಿಲ್ಲಬೇಕು
ಸುಳಿದಡೆ ಹೊನ್ನು ಹೆಣ್ಣು ಮಣ್ಣು ಬಿಟ್ಟು
ನೆಟ್ಟನೆ ಜಂಗಮವಾಗಿ ಸುಳಿಯಬೇಕು
ನಿಂದು ಭಕ್ತನಲ್ಲದ ಸುಳಿದು ಜಂಗಮವಲ್ಲದ
ಉಭಯ ಭ್ರಷ್ಟರನೇನೆಂಬೆ ಗುಹೇಶ್ವರ ?

- ಅ.ಪ್ರ.ವ. 899

ಪೌರಾಣಿಕವಾಗಿ ಉಲ್ಲೇಖವಾಗುವ ಸಿಂಧು ಬಲ್ಲಾಳ ಶಿವವೇಷಧಾರಿಯಾದ ಜೋಗಿಯೊಬ್ಬನಿಗೆ ತನ್ನ ಪತ್ನಿಯನ್ನು ಕೊಟ್ಟ ಪ್ರಸಂಗವನ್ನಾಧರಿಸಿ ಗುರು ಬಸವಣ್ಣನವರು ಸಹ ಒಬ್ಬ ಜಂಗಮನಿಗೆ ತಮ್ಮ ಪತ್ನಿಯನ್ನು ಕೊಟ್ಟರು ಎಂಬುದಾಗಿ ಹರಿಹರ ಮಹಾಕವಿ ಒಂದು ಪ್ರಸಂಗವನ್ನು ಬಸವರಾಜ ದೇವರ ರಗಳೆಯಲ್ಲಿ ಚಿತ್ರಿಸಿದ್ದಾನೆ.

ಗುರು ಬಸವಣ್ಣನವರ ನಂಬಿಕೆ- ಬೋಧನೆಗಳಲ್ಲಿ ನೀತಿ, ಪರಧನ - ಪರಸತಿಯರ ಒಲ್ಲದ ಪರಿಶುದ್ಧತೆಯೇ ಪ್ರಮುಖವಾಗಿದೆ. ಮತ್ತು ಅನೀತಿವಂತನನ್ನು ನಿಷ್ಠುರವಾಗಿ ಖಂಡಿಸಿ ಮಾತನಾಡುವ ಅವರು, ಪರಸ್ತ್ರೀಯನ್ನು ಬಯಸುವವನನ್ನೆ ಜಂಗಮನೆಂದು ಗೌರವಿಸುವುದುಂಟೆ?

ಆಚಾರವಿಡಿದು ಗುರು, ಆಚಾರವಿಡಿದು ಲಿಂಗ,
ಆಚಾರವಿಡಿದು ಜಂಗಮ, ಆಚಾರವಿಡಿದು ಪ್ರಸಾದ
ಆಚಾರವಿಡಿದು ಭಕ್ತ ಆಚಾರವಿಡಿದು ಶರಣ
ಆಚಾರವಿಲ್ಲದಿರ್ದಡೆ ಗುರುವಲ್ಲ, ನರನು
ಆಚಾರವಿಲ್ಲದಿರ್ದಡೆ ಲಿಂಗವಲ್ಲ, ಪಾಷಾಣ
ಆಚಾರವಿಲ್ಲದಿರ್ದಡೆ ಜಂಗಮವಲ್ಲ, ಅಶನಧಾರಿ
ಆಚಾರವಿಲ್ಲದಿರ್ದಡೆ ಪ್ರಸಾದವಲ್ಲ, ಎಂಜಲು

ಆಚಾರವಿಲ್ಲದಿರ್ದಡೆ ಭಕ್ತನ ಭವಿ
ಆಚಾರವಿಲ್ಲದಿರ್ದಡೆ ಶರಣನಲ್ಲ, ಮರುಳು
ಇಂತಿವೆಲ್ಲಕ್ಕೆಯೂ ಸದಾಚಾರವೇ ಕಾರಣ ಲಿಂಗದೇವ - ಬ.ವ.ದೀ -1025

ಪರಸ್ತ್ರೀಯನ್ನು ಬಯಸುವವನು, ಹೆಂಗೂಸಿಲ್ಲದೆ ಇರ್ದುದಿಲ್ಲ ಎಂದು ಕೇಳುವ ಅನಾಚಾರಿಯನ್ನು ಜಂಗಮ ಎಂದು ಬಸವಣ್ಣನವರು ಗೌರವಿಸುವುದುಂಟೆ ? ಅವನ ತುಚ್ಛ ಬೇಡಿಕೆ ಈಡೇರಿಸುವುದುಂಟೆ? ಆ ರೀತಿಯಾಗಿ ಆಲೋಚಿಸುವ ಮೂಢ ಭಕ್ತನನ್ನು ಎಷ್ಟು ಕಠಿಣವಾದ ಭಾಷೆಯಲ್ಲಿ ಖಂಡಿಸಿದ್ದಾರೆ ನೋಡಿ :

ಸದ್ಗುರು ಮಾರ್ಗಾಚಾರದ ನೆಲೆ ಕಲೆಯನರಿಯದೆ
ಸದಾಚಾರ ಸದ್ಭಕ್ತನಲ್ಲಿ ಆಡಂಬರ, ಲಾಂಛನದ ವೇಷವ ಧರಿಸಿ,
ಗ್ರಾಸವ ಹೊರೆದು ಗುಹ್ಯಲಂಪಟ ಹೆಚ್ಚಿ
ಆ ಭಕ್ತನ ಕ್ರಿಯಾಶಕ್ತಿಗೆ ಭ್ರಮಿಸುವನೊಬ್ಬ ಚರಪ್ರಾಣಿಯ
ಜಡಜಂತುವೆಂಬೆನಯ್ಯಾ,
ಅಂತಾ ಕಾಮವಿಕಾರ ಭ್ರಾಂತನ ಕಾಮವ ಪರಿಹರಿಸಿ,
ಲಿಂಗಾಂಗ ನಿಷ್ಠಾಪರತ್ವವ ಹೇಳದೆ,
ತಾ ಭೋಗಿಸುವ ಸ್ತ್ರೀಯಳ ಕೊಡುವನೊಬ್ಬ
ಸ್ಥಾವರ ಪ್ರಾಣಿಯ ಕ್ರಿಮಿಕೀಟಕ ಪ್ರಾಣಿಯೆಂಬೆನಯ್ಯಾ
ಇಂತು ತನುಮನ ಧನಂಗಳ ಕೊಟ್ಟು ಕೊಂಬ ವಿಚಾರವನರಿಯದೆ
ಬಿಂದುವೇ ನಿಜಶೇಷವೆಂದು ತಿಳಿಯುವ
ಮೂಳನಿಗೆಲ್ಲಿಯದೋ ತ್ರಿವಿಧ ಪ್ರಸಾದ ?
ಸ್ಥಲದಿಂದ ಸ್ಥಲವನರ್ಪಿಸುವುದು ಒಡಲ ಗುಣ
ನಿಃಸ್ಥಲದಿಂದ ನಿಃಸ್ಥಲವನರ್ಪಿಸುವುದು ಪ್ರಾಣನ ಗುಣ
ನೋಡಿ ಆರೈವುದೇ ಅರ್ಪಿತಗುಣ
ಇಂತಹ ಮಹಂತರ ತೋರಿ ಬದುಕಿಸಯ್ಯಾ
ಲಿಂಗ ದೇವಾ.

- ಬ.ವ.ದೀ -1111

ಕಪಟಿಯಾದ, ವಿಷಯಾಸಕ್ತನಾದ ಜಂಗಮನನ್ನು ಜಡಜಂತುವೆಂದು, ಅವನಿಗೆ ತನ್ನ ಪತ್ನಿಯನ್ನು ಮೂಢಭಕ್ತಿಯಿಂದ ಒಪ್ಪಿಸುವವನನ್ನು ಕ್ರಿಮಿಕೀಟವೆಂದು, ಮೂಳನೆಂದು ಕೋಪದಿಂದ ಬೈಯುವ ಗುರು ಬಸವಣ್ಣನವರು ತಾವು ಆ ತಪ್ಪು ಮಾಡುವರೇ? ಪುರಾಣಗಳ, ಕಾವ್ಯಗಳ, ಆಧಾರ ಹಿಡಿದು ಬಸವಣ್ಣನವರ ನಂಬಿಕೆ, ವ್ಯಕ್ತಿತ್ವ, ತತ್ತ್ವಗಳನ್ನು ತಿಳಿಯುವುದಕ್ಕಿಂತಲೂ ವಿಪುಲವಾಗಿ ಸಿಗುವ, ಅವರ ಆತ್ಮಕಥನವಾಗಿರುವ ವಚನಗಳ ಆಧಾರದ ಮೇಲೆ ಅಳೆಯಬೇಕು.

ಗುರು-ಜಂಗಮತ್ವಗಳನ್ನು ಅರಿವು - ಆಚಾರ- ಅನುಭಾವಗಳ ಗಳಿಕೆಯ ಮೇಲೆ ನಿರ್ಧರಿಸಿ, ಅಂಥ ಗುರು - ಜಂಗಮರನ್ನು ಗೌರವಿಸಲು ಹೇಳಿದ್ದಾರೆ.

ಕ್ರಿಯಾಚಾರವಿಲ್ಲದ ಗುರುವಿನ ಕೈಯಿಂದ
ದೀಕ್ಷೆ, ಉಪದೇಶವ ಕೊಳ್ಳಲಾಗದು...
ಕ್ರಿಯಾಚಾರವಿಲ್ಲದ ಶಿಲೆಯ ಲಿಂಗವೆಂದು ಪೂಜಿಸಲಾಗದು
ಕ್ರಿಯಾಚಾರವಿಲ್ಲದ ಭೂತಪ್ರಾಣಿಗಳಲ್ಲಿ
ಜಂಗಮವೆಂದು ಪಾದೋದಕ - ಪ್ರಸಾದವ ಕೊಳಲಾಗದು
ಇಂತಪ್ಪ ಆಚಾರವಿಲ್ಲದ, ಅನಾಚಾರವ ಬಳಸುವ ದುರಾಚಾರಿಗಳಲ್ಲಿ
ಉಪದೇಶವ ಪಡೆದು, ಪಾದೋದಕ ಪ್ರಸಾದವ ಕೊಂಡವಂಗೆ

ಅಘ ನಾಸ್ತಿಯಾಗದು, ಮುಂದೆ ಅಘೋರ ನರಕ ತಪ್ಪದು ಕಾಣ, ಲಿಂಗ್ರದೇವ
- ಬ.ಷ.ಹೆ.ವ-1109

ಆಚಾರ - ವಿಚಾರ ಸಂಪನ್ನರಾದ ಗುರು-ಜಂಗಮರನ್ನು ಗೌರವಿಸಿ, ಅವರಿಂದ ಜ್ಞಾನ-ಅನುಗ್ರಹ ಪಡೆದುಕೊಳ್ಳುವುದು ಭಕ್ತನ ಕರ್ತವ್ಯ. ದುರಾಚಾರಿಯನ್ನು ದೂರವಿಡುವುದೂ ಅಷ್ಟೇ ಮುಖ್ಯ ಎನ್ನುತ್ತಾರೆ.

ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ!
ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿರ್ದಡೆ,
ಲಿಂಗದೇವಾ,
ನೀ ಸಾಕ್ಷಿಯಾಗಿ ಛೀ ಎಂಬೆನು. - ಬ.ವ.ದೀ - 754

ಹಸಿದು, ಬಾಯಾರಿ, ಅಥವಾ ಪೂಜಾ ಪ್ರಸಾದ ಮಾಡಬೇಕು ಎಂದು ಬಂದ ಭಕ್ತನೇ ಇರಲಿ ವಿರಕ್ತನೇ ಇರಲಿ; ಅವನ ಆಪ್ಯಾಯನಕ್ಕೆ ನೀಡಬೇಕು. ಜ್ಞಾನಿ ಎಂದಲ್ಲದಿದ್ದರೂ ಭಕ್ತನ ಲಿಂಗ ಲಾಂಛನಕ್ಕೆ. ಜಂಗಮದ ಕಾಷಾಯ ಲಾಂಛನಕ್ಕೆ ಶರಣೆನ್ನಬೇಕು. ಆದರೆ ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದ ಅನಾಚಾರಿ ಎಂದು ತಿಳಿದಾಗ, ದೇವರೇ (ಅಂತರಾತ್ಮ) ಆಜ್ಞಾಪಿಸಿದನೆಂದು ಛೀಮಾರಿ ಹಾಕಬೇಕು. ಈ ರೀತಿ ಬಸವಣ್ಣನವರು ಹೇಳಿದರೆ. ಚನ್ನಬಸವಣ್ಣನವರು ತಮ್ಮೊಂದು ವಚನದಲ್ಲಿ, ದೀಕ್ಷೆಕೊಟ್ಟ ಗುರುವಿನಲ್ಲಿ ಅನಾಚಾರ ಕಂಡು ಬಂದರೆ ಆ ವ್ಯಕ್ತಿಯನ್ನು ಬಿಡಬೇಕು ಎನ್ನುತ್ತಾರೆ.

ಅಯ್ಯಾ, ಗುರುವನು ಹೊಂದಿ ಗುರುಪುತ್ರನಾದ ಬಳಿಕ
ಅಕಸ್ಮಾತ್ ಆ ಗುರುವಿನಲ್ಲಿ ಅನಾಚಾರ ದುರಾಚಾರಗಳು ಮೈದೋರಿದಲ್ಲಿ
ಅವು ಸೂಕ್ಷ್ಮವಿದ್ದಡೆ ತಿದ್ದಿಕೊಳ್ಳಬೇಕು.
ಸ್ಥೂಲವಿದ್ದಡೆ ಆ ಗುರುವ್ಯಕ್ತಿಯನುಳಿದು
ತಾನರಿದ ಗುರುತತ್ತ್ವವ ನಂಬಿ ಸದಾಚಾರವ ಸಾಧಿಸುತ್ತಿರಬೇಕು.
ಇಂತೀ ಆಚರಣೆಯೆ ನಿಮ್ಮ ಶರಣರಿಗೆ ಸದಾ ಸಮ್ಮತವಾಗಿರ್ಪುದು ಕಾಣಾ,
ಕೂಡಲ ಚನ್ನಸಂಗಮದೇವಾ! - ಚ.ಬ.ವ-116

ಧರ್ಮಪಿತರ ಧರ್ಮಪತ್ನಿ ತಾಯಿ ನೀಲಾಂಬಿಕೆ ಸಾಮಾನ್ಯರಲ್ಲ. ತಾನೂ ಅಸಾಮಾನ್ಯ ಸಾಧನೆ ಮಾಡಿದವರು. ಅಲ್ಲದೆ ಶರಣೆಯರು ಪತಿಯೆ ದೈವ ಅವನ ನೆರಳಿನಂತೆ ನಡೆಯಬೇಕು ಎನ್ನುವವರಲ್ಲ ಒಂದು ಸೇರು ಅಕ್ಕಿ ಜಾಸ್ತಿ ತಂದ ಮಾರಯ್ಯನಿಗೇ ಲಕ್ಕಮ್ಮ ಬುದ್ಧಿಹೇಳಿದ್ದಾಳೆ. ಅಂದಾಗ ಬಸವಣ್ಣನವರು ಜಂಗಮನಿಗೆ ಪತ್ನಿಯನ್ನು ಒಪ್ಪಿಸಿದರೆ, ಮೂಕ ಕುರಿಯು ವಧಿಸುವವನ ಹಿಂದೆ ಸಾಗಿದಂತೆ, ನೀಲಾಂಬಿಕೆ ಒಪ್ಪಿಕೊಳ್ಳಲುಂಟೆ ? ವಿಚಾರ ವಾದಿಯಾದ ಆಕೆ ಅಗತ್ಯಬಿದ್ದರೆ ಪತಿಗೇ ಬುದ್ಧಿ ಹೇಳಬಹುದಿತ್ತು, ಅನುಭವ ಮಂಟಪದಲ್ಲಿ ಇಂಥ ಸ್ತ್ರೀಶೋಷಣೆಯನ್ನು ಚರ್ಚಿಸಬಹುದಿತ್ತು.

ಅದಿರಲಿ, ಈ ಧೂರ್ತರು ತಮ್ಮ ಸ್ವಾರ್ಥ ಮತ್ತು ಚಪಲತೆಯ ತೃಪ್ತಿಗಾಗಿ ಇಂಥ ಹೀನ ಹಸ್ತಕ್ಷೇಪ ಪ್ರಕ್ಷಿಪ್ತತೆ ಮಾಡುವರೇಕೆ ? ಸ್ವತಂತ್ರವಾದ ಸಾಹಿತ್ಯ ಬರೆಯಬಾರದೇಕೆ ? ಅವರೇನೋ ಬರೆಯಬಹುದು, ಓದುವವರಾರು ಮತ್ತು ಅವರ ಮಾತು ಎಂದರೆ ಭಾವುಕ ಭಕ್ತರು ನಂಬುವರೇ ? ಪ್ರಸಿದ್ಧ ಕಂಪೆನಿಗಳ ಲೇಬಲ್ ಹಚ್ಚಿ ಹೇಗೆ ಕೆಲವು ಮೋಸಗಾರರು, ಸ್ಥಳೀಯ ಕಂಪೆನಿಗಳು ಸಾಮಗ್ರಿ ಮಾರುವರೋ ಹಾಗೆ ಈ ಧೂರ್ತರು ಕೈಯಾಡಿಸಿರುವುದು ಬಸವಣ್ಣ, ಚನ್ನಬಸವಣ್ಣನವರ ವಚನಗಳಲ್ಲಿ. ವಚನಗಳ ಭಾಷೆಯೂ ಸರಳವಾಗಿರುವುದರಿಂದ ಸಂಚುಗಾರರ ಕೆಲಸ ಬಹಳ ಸುಲಭ.

ಕಲ್ಲಿನ ತುಂಡುಗಳನ್ನು ಮಾರ ಹೋದರೆ ಕೊಳ್ಳುವವರು ಹೆಚ್ಚಿನ ಬೆಲೆ ಕೊಡರು ಎಂದು, ಅಕ್ಕಿಗೆ ಕಲ್ಲು ಹರಳು ಬೆರೆಸಿ ಕಳ್ಳ ವ್ಯಾಪಾರಿ ಮಾರುವಂತಿದೆ ಈ ಧೂರ್ತರ ಕೆಲಸ. ಹೀಗಾಗಿ ವಚನಗಳ ಶುದ್ಧೀಕರಣ ಅತ್ಯಗತ್ಯವಾಗಿದೆ.

☹ ಸಮಸ್ಯೆ..? - ಸಮಾಧಾನ..! ☺

- ಸಂಗಮೇಶ್ವರ ಪಾಟೀಲ್, ಧಾರವಾಡ

? ಗುರು ಬಸವಣ್ಣನವರ ಬಗ್ಗೆ ಕೆಲವರು ಏಕ ವಚನದಲ್ಲಿ ಅವ, ಇವ, ಬಂದ, ಹೋದ, ಮಾಡಿದ ಎಂದು ಭಾಷಣ ಮಾಡುವರು ಮತ್ತು ಬರೆಯುವರು. ಆಗ ನಾವು ಅಂದರೆ ರಾಷ್ಟ್ರೀಯ ಬಸವ ದಳದವರು ಅದನ್ನು ನೇರವಾಗಿ ಪ್ರಶ್ನಿಸುತ್ತಿದ್ದೇವೆ. ಅದಕ್ಕೆ ಅವರಲ್ಲಿ ಕೆಲವರು ಹೇಳುತ್ತಾರೆ, "ನಾವು ಆತ್ಮೀಯತೆಯಿಂದ ಹಾಗೆ ಸಂಬೋಧಿಸುತ್ತೇವೆ. ಬಹುವಚನದಲ್ಲಿ ಆತ್ಮೀಯತೆ ಕಡಿಮೆ." ಎಂದು. ಇದು ಸರಿಯೆ ?

★ ಮೇಲಾಧಿಕಾರಿಗಳು, ಗಣ್ಯರು ಮುಂತಾದವರನ್ನು ಬಹುವಚನದಲ್ಲಿಯೇ ಸಂಬೋಧಿಸಲಾಗುವುದು. ತಂದೆ- ತಾಯಿಗಳನ್ನು ಸಹಿತ ಬಹುವಚನದಲ್ಲೇ ಕರೆಯಲಾಗುವುದು. ಧರ್ಮಗುರು ಅದಕ್ಕಿಂತ ಕಡಿಮೆಯೆ? ಸಾಂಸ್ಕೃತಿಕವಾಗಿ ತೆಗೆದುಕೊಂಡಾಗಲೂ ಸಹಿತ ನಮ್ಮಪ್ಪ ಬಂದ, ಹೋದ; ಅವ್ವ ಬಂದಳು ಹೋದಳು ಎಂದೆಲ್ಲ ಉತ್ತರ ಕರ್ನಾಟಕದಲ್ಲಿ ಇರುವ ಪರಿಪಾಠದಂತೆ ಹೇಳಿದಾಗ ಆ ಭಾಷೆ ಅಷ್ಟೊಂದು ಸುಧಾರಿಸಿದ್ದಲ್ಲ ಎಂಬ ಭಾವವು ಉಂಟಾಗುತ್ತದೆ. "ಎಲೆ ಮಗನೆ ಯಾಕ್ಲೆ ಸೊಕ್ಕು ಬಂದೈತೆ" ಎಂದರೆ ಉತ್ತರ ಕರ್ನಾಟಕದಲ್ಲಿ ಪ್ರೀತಿಯ ಬೈಗುಳ. ಈ ಪದಗಳನ್ನು ಹಳೆ ಮೈಸೂರಲ್ಲಿ ಪ್ರಯೋಗ ಮಾಡಿದರೆ ಅವರು ಕೆಂಡಾಮಂಡಲವಾಗುತ್ತಾರೆ. ಭಾವವನ್ನು ವ್ಯಕ್ತಪಡಿಸುವ ಮಾಧ್ಯಮ ಭಾಷೆ. ಅದು ಸುಮಧುರವಾದಷ್ಟೂ ಒಳ್ಳೆಯದು; ಸಾಹಿತಿಗಳು ಆತ್ಮೀಯತೆಯಿಂದ ಮಾತನಾಡುತ್ತೇವೆ ಎಂದು ಸಮರ್ಥಿಸಿಕೊಳ್ಳಬಹುದು. ಆದರೆ ಜನ ಸಾಮಾನ್ಯರು ಅಗೌರವದಿಂದ ಬಳಸಲು ಆರಂಭಿಸುತ್ತಾರೆ. ಧರ್ಮಪಿತರ ವ್ಯಕ್ತಿತ್ವಕ್ಕೆ ಚ್ಯುತಿ ಬರದಂತೆ ನಾವು ಮಾತನಾಡಬೇಕು ; ಬರೆಯಬೇಕು.

- ರಾಮಚಂದ್ರ ನಾಯಕ್, ಕೆಂಗೇರಿ, ಬೆಂಗಳೂರು

? ಗುರು ಬಸವಣ್ಣನವರು ಅನುಭವ ಮಂಟಪದಲ್ಲಿ ಎಲ್ಲರಿಗೂ ಪ್ರವೇಶದ ಅವಕಾಶ ನೀಡಿದರಲ್ಲದೆ, ಧರ್ಮ ಸಂಸ್ಕಾರ ಸಹ ಕೊಟ್ಟರು. ಆದರೆ ಬಸವೇಶ್ವರ ಗುಡಿಗಳು ಎಂದು ಎಲ್ಲ ಊರುಗಳಲ್ಲಿ ಇರುತ್ತವೆ. ಅಲ್ಲಿ ಲಿಂಗಾಯತರ ಹೊರತಾಗಿ ಬೇರೆ ಜನಾಂಗದವರಿಗೆ ಪ್ರವೇಶವಿರುವುದಿಲ್ಲ. ಇದು ತಪ್ಪಲ್ಲವೆ? ಬಸವಣ್ಣನವರ ಆಶಯಕ್ಕೆ ಹೊರತಲ್ಲವೆ?

★ ಬಸವೇಶ್ವರ ಗುಡಿಗಳು ಎಂದು ಅಲ್ಲಿ "ವೀರಶೈವರು" ನಂದಿಯನ್ನು ಕೂರಿಸಿರುತ್ತಾರೆ. ಬಸವಣ್ಣನವರನ್ನು ಜಡಗಟ್ಟಿಸಲೆಂದೇ ಕೆಲವರು ವೀರಶೈವ ಪದವನ್ನು ಒಳಗೆ ತೂರಿಸಿದರು; ಕ್ರಾಂತಿಪುರುಷನನ್ನು ಎತ್ತನ್ನಾಗಿ ಮಾಡಿದರು. ಅದೇ ಮಾನವಾಕಾರದ ಶ್ರೀ ಗುರು ಬಸವಣ್ಣನವರನ್ನು ಸ್ಥಾಪಿಸಿರುವ ಬಸವ ಮಂಟಪಗಳು ಆಗಿವೆಯಲ್ಲ ಅಲ್ಲಿ ನೋಡಿರಿ ಮಾನವ ಮಾತ್ರರಿಗೆಲ್ಲ ಅವಕಾಶವಿರುತ್ತದೆ. ದೀಕ್ಷಾ ಸಂಸ್ಕಾರವೂ ಲಭ್ಯ. ಧರ್ಮಪಿತ ಬಸವಣ್ಣನವರು ಶ್ರದ್ಧಾಕೇಂದ್ರವಾದರೆ ಲಿಂಗಾಯತ ಧರ್ಮ ವಿಶ್ವಧರ್ಮವಾಗುತ್ತದೆ. ಅವರು ನಂದಿಯಾದರೆ ಅದು ವೈದಿಕ ಧರ್ಮದ ಪ್ರತಿರೂಪವಾಗುತ್ತದೆ.

? ಕೆಲವು ಮಠಗಳಲ್ಲಿ ಮಠಾಧೀಶರ ಸುತ್ತ ಭಯಂಕರ ಆಡಳಿತಾಧಿಕಾರಿಗಳು ಸೇರಿಕೊಂಡಿರುತ್ತಾರೆ. ಅವರು ದುಷ್ಟಸ್ವಭಾವದವರು ಎಂದು ತಿಳಿದೂ ಸಹ ಏಕೆ ಅವರನ್ನು ಮಠಾಧೀಶರು ದೂರವಿಡುವುದಿಲ್ಲ?

★ ಭೂತ ಪ್ರೇತಗಳಲ್ಲಿ ಅಸಾಮಾನ್ಯ ಶಕ್ತಿ ಇರುವುದಂತೆ; ಕೆಲವು ಪಿಶಾಚಿಗಳು ದೂರದೂರದ ಸುದ್ದಿಗಳನ್ನು ಸಂಗ್ರಹಿಸಿ ತರುತ್ತವಂತೆ; ಮತ್ತೆ ಕೆಲವು ಹಲವಾರು ವಸ್ತುಗಳನ್ನು ಕದ್ದು ತಂದು

ಸುದ್ದಿಗಳನ್ನು ಸಂಗ್ರಹಿಸಿ ತರುತ್ತವಂತೆ; ಮತ್ತೆ ಕೆಲವು ಹಲವಾರು ವಸ್ತುಗಳನ್ನು ಕದ್ದು ತಂದು ಅವನ್ನು ವಶಮಾಡಿಕೊಂಡವನಿಗೆ ತಲುಪಿಸಿ ಅವನನ್ನು ಶೂನ್ಯದಿಂದ ವಸ್ತುವನ್ನು ಸೃಷ್ಟಿ ಮಾಡುವ ಪವಾಡ ಪುರುಷನೆಂದು ಕೀರ್ತಿಶಾಲಿಯನ್ನಾಗಿ ಮಾಡುತ್ತವಂತೆ, ಊಟ ತಂದುಕೊಡುತ್ತವಂತೆ. ಹೀಗೆಂದು ಪೈಶಾಚಿಕ ವಿದ್ಯೆಗಳಿಗೆ ಪ್ರಯತ್ನಿಸುವವರು ಹೇಳುತ್ತಾರೆ. ಆದರೆ ಆ ಪಿಶಾಚಿಗಳನ್ನು ವಶಮಾಡಿಕೊಂಡವನು ಬಹಳ ಎಚ್ಚರಿಕೆಯಲ್ಲಿರಬೇಕಂತೆ. ಕೆಲವು ವಿಷಯಗಳಲ್ಲಿ ಒಂದು ಚೂರು ಮೈಮರೆತರೆ ಅವೇ ಅವನನ್ನು ಕೊಂದು ಬಿಡುತ್ತವಂತೆ.

ಅದೇ ರೀತಿ ಕೆಲವು ಗಣ್ಯರು, ಆಡಳಿತಾಧಿಕಾರಿಗಳು ಅಧ್ಯಕ್ಷರುಗಳು ಮಠಾಧೀಶರನ್ನು ಗೊಂಬೆಯಂತೆ ಅಧಿಕಾರದಲ್ಲಿ ಕೂರಿಸುತ್ತಾರೆ. ಅವರಿಗೆ ಕೇಂದ್ರ / ರಾಜ್ಯ ಸರ್ಕಾರಗಳೊಡನೆ ಅದ್ಭುತ ಸಂಬಂಧವಿರುತ್ತದೆ. ಮೆಡಿಕಲ್, ಇಂಜನಿಯರಿಂಗ್ ಮುಂತಾದ ಸಂಸ್ಥೆಗಳ ಪರವಾನಗಿ ತರಬಲ್ಲರು. ಅಗತ್ಯ ಬಿದ್ದಾಗ ಡಿ.ಸಿ.ಎಸ್.ಪಿಗಳ ಮೂಲಕ ಕೋಟಿ ಗಟ್ಟಳೆ ಹಣ ಸಂಗ್ರಹಿಸ ಬಲ್ಲರು. ಮಠಾಧೀಶರಿಗೆ ಇನ್ನೇನುಬೇಕು, ಕೀರ್ತಿ, ಹಣ, ಗೌರವ ಮಠದ ಬಾಗಿಲಿಗೆ ಬಂದು ಬಿಡುತ್ತವೆ. ಆದ್ದರಿಂದ ಮೌನವಾಗಿ, ಸಾಕ್ಷೀಭೂತವಾಗಿ "ಎಲ್ಲ ವ್ಯವಹಾರಗಳನ್ನೂ" ನೋಡುತ್ತ ಇರುತ್ತಾರೆ. ದುಷ್ಟವಲಯದ ವಿರುದ್ಧ ಧ್ವನಿ ಎತ್ತುವುದಿಲ್ಲ. ಅದಕ್ಕಿಂತ ಮಿಗಿಲಾಗಿ ಹೇಗೆ ವಶಮಾಡಿಕೊಂಡ ಭೂತ - ಪ್ರೇತ - ಪಿಶಾಚಿಗಳು ವಶಮಾಡಿಕೊಂಡವನು ಎಡವಿದರೆ ಅವನನ್ನೇ ನಾಶ ಮಾಡುವಂತೆ, ಪ್ರಭಾವಶಾಲಿಗಳು ಸಹ ಗುರುಗಳು ಅಂತಲೂ ನೋಡದೆ ತಿಂದು ಹಾಕುತ್ತಾರೆ. ಅದಕ್ಕೇ ಹೆದರಿಕೊಂಡು ಅನೇಕರು ದಿವ್ಯ ಮೌನ ವಹಿಸಿರುತ್ತಾರೆ.

- ಮಂಜುನಾಥ ಅಂಗಡಿ, ಬೆಳಗಾವಿ .

?. ವಿಜಯ ಕರ್ನಾಟಕ ಪತ್ರಿಕೆಯ ನಮ್ಮ ಬೆಳಗಾವಿ ಪುರವಣಿಯಲ್ಲಿ ಓರ್ವ ಮಠಾಧೀಶರು ಹಾನಗಲ್ ಕುಮಾರ ಸ್ವಾಮಿಗಳನ್ನು ಕುರಿತು ಹೊಗಳಿದ ವರದಿ ಬಂದಿದೆ. ಆ ಸ್ವಾಮಿಗಳು ಕುಮಾರ ಸ್ವಾಮಿಗಳನ್ನು ಯುಗ ಪ್ರವರ್ತಕರು ಎಂದು ಕೊಂಡಾಡಿದ್ದಾರೆ ಮಾತ್ರವಲ್ಲದೆ ಮಹಿಳೆಯರಿಗೆ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು ಅವಕಾಶ ಕೊಟ್ಟವರಲ್ಲಿ ಮೊದಲಿಗರು ಎಂದಿದ್ದಾರೆ. ಇದು ನಿಜವೆ?

★. "ಸತ್ತ ಎಮ್ಮೆಗೆ ಸೇರು ತುಪ್ಪ ಎಂಬ ಒಂದು ಗಾದೆ ಇದೆ. ಇದ್ದಾಗ ಆ ಎಮ್ಮೆ ಎಷ್ಟು ಹಿಂಡಿತೋ ಬಿಟ್ಟಿತೋ, ಅದು ಸತ್ತ ನಂತರ "ಈ ಎಮ್ಮೆ ಅಷ್ಟು ಕರೀತಿತ್ತು ಇಷ್ಟು ಕರೀತಿತ್ತು ಎಂದು ಸಾಕಿದವರು ಹೊಗಳುವುದುಂಟು. ಯುಗ ಪುರುಷ, ಯುಗ ಪ್ರವರ್ತಕ ಮುಂತಾದ ಪದಗಳನ್ನೂ ವಿವೇಚನೆ ಇಲ್ಲದೆ ಬಳಸಿ ಅವುಗಳ ಘನತೆಯನ್ನು ಹಾಳು ಮಾಡುವುದು ವಿಷಾದನೀಯ ಸಂಗತಿ. 1876 ರಲ್ಲಿ ಜಂಗಮವು ಜಾತಿಯಾಗಿ ವಿಕೃತ ಗೊಂಡಿರಲಿಲ್ಲ ; ಮಹಿಳೆಯರಿಗೆ ಸಮಾನ ಗೌರವವಿತ್ತು ಎಂದು ಮೈಸೂರು ಗೆಜೆಟಿಯರದಲ್ಲಿ ರೈಸ್ ಅವರು ದಾಖಲಿಸಿದ್ದಾರೆ. ಆದರೆ ಶಿವಯೋಗ ಮಂದಿರದ ಸಂಸ್ಥಾಪನೆ ಮಾಡಿ ಅಲ್ಲಿ ಹುಟ್ಟು ಜಂಗಮರಿಗೆ ಮಾತ್ರ ಪ್ರವೇಶ ಎಂದು ನೇಮ ಮಾಡಿ ಕುಮಾರ ಸ್ವಾಮಿಗಳು ಲಿಂಗಾಯತ ಧರ್ಮಕ್ಕೆ ಮೊದಲನೆ ಏಟು ಕೊಟ್ಟರು. ವೀರಶೈವ ಮಹಾ ಸಭೆ ಸ್ಥಾಪಿಸಿ "ವೀರಶೈವ" ಎಂಬ ಅಸಂಬದ್ಧ ಪದವನ್ನು ಲಿಂಗಾಯತ ಧರ್ಮವೃಕ್ಷಕ್ಕೆ ಪರೋಪಜೀವಿ ಬಳ್ಳಿಯಂತೆ ಹಬ್ಬಿಸಿ ಎರಡನೆ ಏಟು ಕೊಟ್ಟರು. ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯ ಕಲಿಸದೆ ವೇದಾಗಮ ಪುರಾಣಗಳನ್ನು ವಟುಗಳಿಗೆ ಕಲಿಸಿ ಮೂರನೆಯ ಏಟು ಕೊಟ್ಟರು. ಹೆಣ್ಣು ಮಕ್ಕಳ ಬಳೆ ಸದ್ದು ಸಹ ಕೇಳದಂತೆ ವ್ಯವಸ್ಥೆ ಮಾಡಿದ್ದರಂತೆ; ಹೆಣ್ಣನ್ನು ತಾಯಿಯ ಸ್ವರೂಪದಲ್ಲಿ ಕಾಣು ಎಂದು ದೃಷ್ಟಿಯನ್ನು ದೈವೀಕರಿಸಿದ ವಚನ ಧರ್ಮದ ಗಂಧಗಾಳಿ ಸಹ ತೀಡಿರದ ಮಠಾಧೀಶರಾದ ಅವರು ಯುಗ ಪ್ರವರ್ತಕ ಎಂದರೆ ಹುಚ್ಚರು ಸಹ ನಗಲಿಕ್ಕಿಲ್ಲ.

ಮಾತ್ರವಲ್ಲ ವೀರಶೈವ ಮಹಾ ಸಭೆಯ ಅಧಿವೇಶನದಲ್ಲಿ ಮಹಿಳೆಯರು ಭಾಗವಹಿಸಲು ಅವಕಾಶ ಇರಲಿಲ್ಲ. ಸೊಲ್ಲಾಪುರದಲ್ಲಿ ಸರ್.ಕೆ.ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ 1907ರಲ್ಲಿ ನಡೆದ ವೀರಶೈವ ಮಹಾಸಭಾ ಅಧಿವೇಶನದಲ್ಲಿ ಮೊಟ್ಟ ಮೊದಲಿಗೆ ಮಹಾರಾಷ್ಟ್ರದ ಓರ್ವ ಮಹಿಳೆ ಭಾಗವಹಿಸಿದಾಗ ಅಪ್ಪಾಸಾಹೇಬ ವಾರದ ಎನ್ನುವ ಪ್ರಜ್ಞಾವಂತ ಮುಖಂಡರು ಆ ಮಹಿಳೆಯನ್ನು ಗೌರವಿಸಿ ಬಂಗಾರದ ಪದಕ ಕೊಟ್ಟರಂತೆ. ಆ ನಂತರ ಮಹಿಳೆಯರಿಗೆ 1909ರಲ್ಲಿ ಅಧಿವೇಶನದಲ್ಲಿ ಭಾಗವಹಿಸುವ ಅವಕಾಶವನ್ನು ಸಮಾಜದ ಹಿರಿಯರು ಕಲ್ಪಿಸಿದರಂತೆ. ದುರ್ದೈವವೆಂದರೆ ಆ ಮಹಿಳೆಯರಿಗೆ ಕೊಡಮಾಡಿದ ಈ ವಿಶೇಷ ಹಕ್ಕನ್ನು ವೀರಶೈವ ಮಹಾ ಸಭೆ ವಾಪಸ್ಸು ಪಡೆದು, ಬಾಗಲಕೋಟೆಯಲ್ಲಿ ನಡೆದ ಅಧಿವೇಶನದಲ್ಲಿ ಮಹಿಳೆಯರ ಪ್ರವೇಶವನ್ನು ನಿಷೇಧಿಸಲಾಯಿತಂತೆ. (ಪುಟ 20, ಆಲಮೇಲ ಶಿವಲಿಂಗರಾವ ದೇಶಮುಖ; ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ)ಜನರು ಈಗ ಪ್ರಜ್ಞಾವಂತರಾಗಿದ್ದಾರೆ, ಸಾಹಿತ್ಯವನ್ನು ಓದುತ್ತಿರುತ್ತಾರೆ. ಅದನ್ನರಿಯದೆ ತಮ್ಮ ಮಾತನ್ನು ಜನ ನಂಬಿ ಬಿಡುತ್ತಾರೆ ಎಂದು ಯಾರನ್ನಾದರೂ ಮತಿಗೆಟ್ಟು ಹೊಗಳಿದರೆ ನಗೆಪಾಟಲಿಗೆ ಈಡಾಗಬೇಕಾಗುತ್ತದೆ.

- ಅಷ್ಟಾವರಣ ದೇಟಿನ, ಅಕ್ಕಿ ಆಲೂರ, ತಾ-ಹಾನಗಲ್

? ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ದಸರಾ ಸಮಯದಲ್ಲಿ ಮಾಡುವ ಆಲೋಚನೆಯಲ್ಲಿ ಸಂಪ್ರದಾಯದ ಅನುಕರಣೆ ಮಾಡಿದಂತೆ ಆಗುವುದಿಲ್ಲವೆ? ಬನ್ನಿ ಸೊಪ್ಪು ಕೊಡಬೇಕೇ ಬೇಡವೆ?

★ ಕಾಲಜ್ಞಾನ ವಚನಗಳ ಪ್ರಕಾರ ಚನ್ನಬಸವಣ್ಣನವರು ಲಿಂಗೈಕ್ಯರಾದುದು ಕಾರ್ತಿಕ ಪೌರ್ಣಿಮೆಯಂದು. ಆ ಕಾಲದಲ್ಲಿ ಮಳೆ ಜಾಸ್ತಿ, ಅಡ್ಡ ಬರುವ ಹಳ್ಳ, ಹೊಳೆ, ನದಿಗಳನ್ನು ದಾಟಿ ಉಳಿವೆಗೆ ಹೋಗುವುದು ಕಷ್ಟಕರ ಹಾದಿ. ಅತ್ಯಂತ ಸುರಕ್ಷಿತ ಸಮಯವೆಂದರೆ ಜನವರಿಯ ನಂತರ. ಮಳೆ ಇರದು ಅಧಿಕ ಬಿಸಿಲೂ ಇರದು. ಹೊಳೆಗಳಲ್ಲಿ ನೀರು ಬತ್ತಿರುವುದಿಲ್ಲ ಆದಕ್ಕಾಗಿಯೇ ಸಾಮಾನ್ಯವಾಗಿ ಜಾತ್ರೆಗಳು ಜನವರಿಯ ನಂತರ ನಡೆಯುತ್ತವೆ. ಚನ್ನಬಸವಣ್ಣನವರ ತೇರು ಮಾಘ ಪೌರ್ಣಿಮೆಗೆ ಎಳೆಯಲ್ಪಡುತ್ತದೆ. ಅಂದರೆ ಇದೊಂದು ಪ್ರಯೋಗಾತ್ಮಕ ಬದಲಾವಣೆ ಕ್ರಿಸ್ ಮಸ್- ಏಸುವಿನ ಜಯಂತಿ ಎಂದು ಆಚರಿಸಲಾಗುವುದು ತಾನೆ? ಅದು ಹಿಂದೆ ಯಹೂದ್ಯರ ಬಲು ದೊಡ್ಡ ಹಬ್ಬದ ದಿವಸ. ಕ್ರೈಸ್ತರು ಅದನ್ನು ಆಚರಿಸದಿರಲೆಂದು ನಂತರ ಯಹೂದ್ಯರ ಹಬ್ಬದ ದಿನವೇ ಏಸುವಿನ ಜಯಂತಿ ಬಳಕೆಗೆ ತರಲಾಯಿತು ಎಂದು ನಾನು ಒಂದು ಲೇಖನದಲ್ಲಿ ಓದಿದ್ದೇನೆ.

ಈ ಹಿನ್ನೆಲೆಯಲ್ಲಿ ಹರಳಯ್ಯ - ಮಧುವರಸ- ಶೀಲವಂತರ ಬಲಿದಾನ ಧರ್ಮಪಿತರ ಗಡಿಪಾರು, ಕಲ್ಯಾಣ ಕ್ರಾಂತಿ ಹೋಳಿ ಹಬ್ಬದ ಹಿಂದು ಮುಂದಿನ ದಿನಗಳಲ್ಲಿ ನಡೆಯಿತಾದರೂ ಆ ಹಬ್ಬ ಅಸಭ್ಯ ವರ್ತನೆಯ ಬೈಗಳ ಹಬ್ಬವಾದ ಕಾರಣ ಆಚರಣೆಯ ದಿನಗಳನ್ನು ಬದಲಿಸಬೇಕಾದುದು ಅನಿವಾರ್ಯ.

ದಸರಾ ಸಾಂಪ್ರದಾಯಿಕವಾಗಿ ದೊಡ್ಡ ಹಬ್ಬ, ಆದರೆ ಅದು ವಚನ ಸಾಹಿತ್ಯಕ್ಕೆ ವಿರುದ್ಧವಾದ ಆಚರಣೆಗಳನ್ನು ಹೊಂದಿರುವ ಹಬ್ಬ, ವಚನ ಸಾಹಿತ್ಯ ನಿಷೇಧಿಸಿರುವ ದೇವತೆಗಳ ಪೂಜೆ, ಬನ್ನಿ ಗಿಡದ ಕಡಿಯುವಿಕೆ, ದುರ್ಗಾಪೂಜೆ- ಪ್ರಾಣಿ ಬಲಿ, ದೇವಿ ಪುರಾಣ ಪಾರಾಯಣ ಎಲ್ಲವೂ ವಚನ ಸಾಹಿತ್ಯ ನಿಷಿದ್ಧ. ಇದನ್ನು ತಪ್ಪಿಸಬೇಕಾದರೆ ಪರ್ಯಾಯವಾಗಿ ಬೇರೊಂದು ಆಚರಣೆ ಬೇಕು. ಶರಣರ ಸಂಸ್ಮರಣೆ ರೂಢಿಗೆ ತಂದರೆ ಪಾರಾಯಣ, ವಚನ ಲೇಖನ ಮಾಡಿ ಹುತಾತ್ಮರಾದ ಈ ಹಬ್ಬ ಅರ್ಥಗರ್ಭಿತವಾಗುತ್ತದೆ.

ಎಲ್ಲರೂ ಸೇರಿ ಬನ್ನಿಗಿಡಗಳನ್ನೆಲ್ಲ ತರಿದು ಹಾಕಿ, ಬೋಳು ಮಾಡುವ ಬದಲು ವಚನಗಳನ್ನೂ ಚಿಕ್ಕಹಾಳೆಗಳಲ್ಲಿ ಬರೆದಿಟ್ಟುಕೊಂಡು, ಬನ್ನಿ ಸೊಪ್ಪಿನ ಬದಲು ಒಂದು ವಚನದ ಹಾಳೆ, ಸ್ವಲ್ಪ ಕಲ್ಲು ಸಕ್ಕರೆ ಕೊಟ್ಟು ಗುರು -ಹಿರಿಯರನ್ನು ಬಂಧು-ಮಿತ್ರರನ್ನು ಭೇಟಿಮಾಡಿ ಶರಣು ಶರಣಾರ್ಥಿ ಮಾಡುವುದು ಬಹಳ ಸೂಕ್ತ.

- ಚಂದ್ರಕಾಂತ ಮೇಲಿನ ಮನಿ, ಧಾರವಾಡ

?. ಪೂಜ್ಯ ಲಿಂಗಾನಂದ ಸ್ವಾಮೀಜಿಯವರಂತೆ, ತಮ್ಮಂತೆ ತ್ಯಾಗ ಮಾಡಿ ಧರ್ಮ ಪ್ರಚಾರ ಮಾಡುವ ಹಂಬಲ ನನ್ನದು. ಆದರೆ ನನ್ನ ತಾಯಿ -ತಂದೆ ಮತ್ತು ಸ್ನೇಹಿತರು ನೌಕರಿ ಮಾಡು, ಗಳಿಸು, ಬೇಕಾದಷ್ಟು ಕಾಣಿಕೆ ಕೊಡು ಎನ್ನುತ್ತಾರೆ. ನಾನು ಹೊಯ್ದಾಟದಲ್ಲಿದ್ದೇನೆ. ನಿಮ್ಮ ಅಭಿಪ್ರಾಯ?

★ ಜಗನ್ಮಾತಾ ಅಕ್ಕಮಹಾದೇವಿಯವರ ಈ ವಚನ ನೋಡಿರಿ.

ಅನ್ನವ ನೀಡುವವರಿಂಗೆ ಧಾನ್ಯವೆಸೆವ ಲೋಕ, ಅರ್ಥವ ಕೊಡುವವರಿಂಗೆ ಪಾಷಾಣವೆಸೆವ ಲೋಕ.
ಹೆಣ್ಣು ಹೊನ್ನು ಮಣ್ಣು ಮೂರನೂ, ಕಣ್ಣಿನಲ್ಲಿ ನೋಡಿ, ಕಿವಿಯಲ್ಲಿ ಕೇಳಿ,
ಕೈಯಲ್ಲಿ ಮುಟ್ಟಿ, ಮಾಡುವ ಭಕ್ತಿ, ಸಣ್ಣವರ ಸಮಾರಾಧನೆಯಾಯಿತು.
ತನ್ನನಿತ್ತು ತುಷ್ಟಿವಡೆವವರನೆನಗೆ ತೋರಾ, ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ.

ಹೆಣ್ಣು, ಹೊನ್ನು, ಮಣ್ಣು ಮೂರನ್ನೂ ಕಣ್ಣಿನಲ್ಲಿ ನೋಡಿ, ಕಿವಿಯಲಿ ಕೇಳಿ, ಕೈಯಲ್ಲಿ ಮುಟ್ಟಿ ಮಾಡುವ ಭಕ್ತಿ ಸಣ್ಣವರ ಸಮಾರಾಧನೆ. ತನ್ನನ್ನೇ ಅರ್ಪಿಸಿಕೊಳ್ಳುವುದು ಹೆಚ್ಚು ಶ್ರೇಷ್ಠ.

- ಶರಣ ಪ್ರಕಾಶ, ಬಿಜಾಪುರ

?. ನನಗೆ ತ್ಯಾಗ ಮಾಡಿ ಧರ್ಮ ಪ್ರಚಾರಕನಾಗಬೇಕೆಂದು ಉತ್ಕಟ ಆಕಾಂಕ್ಷೆ ಇದೆ. ಆದರೆ ನಮ್ಮ ತಂದೆಯವರು ಆರ್ಥಿಕ ಸಂಕಷ್ಟ(ಸಾಲ)ದಲ್ಲಿದ್ದಾರೆ. ಅದನ್ನೆಲ್ಲ ನೌಕರಿ ಮಾಡಿ ತೀರಿಸಿ, ನಂತರ ತ್ಯಾಗ ಮಾಡುವ ಬಯಕೆ ಇದೆ. ನಿಮ್ಮ ಸಲಹೆ ಏನು ?

★ ವ್ಯಕ್ತಿಯ ಜೀವನದ ಬಹು ಅಮೂಲ್ಯ ಸಮಯ 20 ರಿಂದ 40 ವರ್ಷ. ವ್ಯಕ್ತಿಯಲ್ಲಿ ಉತ್ಸಾಹ ಅದಕ್ಕೆ ತಕ್ಕ ಶಕ್ತಿ ತುಂಬಿರುತ್ತದೆ. ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಬಹಳ ಉತ್ತಮ ಸಮಯವಿದನ್ನು ವ್ಯರ್ಥ ಮಾಡಿಕೊಳ್ಳಬಾರದು. ಒಬ್ಬ ವ್ಯಕ್ತಿ ತ್ಯಾಗಿಯಾಗಿ ತನ್ನ ಪೂರ್ವಾಶ್ರಮದವರಿಗೆ ಒಳ್ಳಿತಾಗಲೆಂದು ಶುಭವನ್ನು ಹಾರೈಸಿದರೆ ಅವರ ಕಷ್ಟಕಾರ್ಪಣ್ಯಗಳೆಲ್ಲ ದೂರವಾಗುತ್ತವೆ. ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಮನೆಯ ಹಿರಿಯ ಮಗ, ತಾಯಿ- ತಂದೆ ನಿಸ್ಸಹಾಯಕ ಪರಿಸ್ಥಿತಿಯಲ್ಲಿದ್ದರು. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಆದರೆ ಧರ್ಮದ ತಂದೆ ಗುರು ಬಸವಣ್ಣನವರಿಗಾಗಿ ಮತ್ತು ತಾಯಿ ವಚನ ಸಾಹಿತ್ಯಕ್ಕಾಗಿ ತ್ಯಾಗ ಜೀವನಕ್ಕೆ ಅಡಿ ಇಟ್ಟರು. ಅವರಿಂದ ಧರ್ಮ ಪ್ರಚಾರವಾಯಿತು. ಇವರು ಆರ್ಥಿಕವಾಗಿ ಪೂರ್ವಾಶ್ರಮದವರಿಗೆ ನೆರವು ನೀಡದಿದ್ದರೂ, ಪುಣ್ಯದ ಫಲದಿಂದ ಅವರೆಲ್ಲರೂ ಹೇಗೋ ದಡಮುಟ್ಟಿದರು. ಮನೆಯ ಸಂಕಷ್ಟ ಪರಿಹರಿಸಲೆಂದು ಗುರುಗಳು ಅಲ್ಲೇ ಉಳಿದಿದ್ದರೆ ಧರ್ಮ-ಸಮಾಜಕ್ಕೆ ಆಗುತ್ತಿದ್ದ ನಷ್ಟ ಏನೆಂಬುದನ್ನು ಊಹಿಸಿಕೊಳ್ಳಿರಿ.

- ಹೆಸರು ಬೇಡ, ಊರು ಬೇಡ, ನೊಂದವಳು

? ಹಿಂದು ಸಮಾಜದ ಒಂದು ಕೆಳಗಿನ ಜಾತಿಯಲ್ಲಿ ಹುಟ್ಟಿದವಳು ನಾನು. ನಮ್ಮೂರಲ್ಲಿ ಪೂಜ್ಯ ಗಂಗಾ ಮಾತಾಜಿಯವರ ಪ್ರವಚನ ನಡೆಯಿತು. ನಮ್ಮ ಮನೆ ಮಂದಿಯ ಜೊತೆಗೆ ನಾನೂ ಪ್ರವಚನ ಕೇಳಿ ಪ್ರಭಾವಿತಳಾದೆ. ವಿಭೂತಿ ಧರಿಸಲು ತೊಡಗಿದೆ, ಮಾಂಸಾಹಾರ ಬಿಟ್ಟೆ, ರಾಷ್ಟ್ರೀಯ ಬಸವ ದಳ ಆಯಿತು; ಪ್ರಾರ್ಥನೆಗೆ ಹೋಗತೊಡಗಿದೆ. ಆದರೆ ನಮ್ಮ ಮನೆಯಲಿ ವಿಪರೀತ ಗಲಾಟೆ ಶುರುವಾಗಿದೆ. ನಮ್ಮ ತಾಯಿ ಮುಂತಾದವರೂ ಪ್ರವಚನ ಕೇಳಿದರು; ಆದರೆ ಅವರಲ್ಲಿ ಏನೊಂದೂ

ಬದಲಾವಣೆಯಾಗಿಲ್ಲ. "ನಾವು ಕೀಳು ಜಾತಿಯವರು ವಿಭೂತಿ ಹಚ್ಚಬಾರದು, ಮಾಂಸ ತಿನ್ನುವುದು ಜಾತಿ ಧರ್ಮ ಅದನ್ನು ಬಿಡಬಾರದು, ಪ್ರಾರ್ಥನೆ ಮುಂತಾದವು ಮೇಲ್ಜಾತಿಯವರಿಗೆ; ನಮಗೇಕೆ?" ಎಂದು ನಿಂದಿಸುವುದಲ್ಲದೆ, ಹೊಡೆಯುತ್ತಾರೆ ಸಹ. ಈ ಬಗ್ಗೆ ನಿಮ್ಮ ಸಲಹೆ ಏನು?

★ ಒಂದು ಮಡಿಕೆಯಲ್ಲಿ ಬಹಳ ಕಾಲ ಹೆಂಡ ತುಂಬಿಟ್ಟ ಬಳಿಕ ಆ ಮಡಿಕೆಯ ಕಣ ಕಣದಲ್ಲೂ ಹೆಂಡದ ಕಣಗಳು ಸೇರಿಕೊಂಡಿರುವಂತೆ ನೀವು ಕೀಳು ಎಂದು ಮೇಲ್ಜಾತಿಯವರು, ಅವರನ್ನು ಪ್ರಚೋದಿಸುವ (ಅ)ಧರ್ಮ ಶಾಸ್ತ್ರಗಳು ಹೇಳಿ ಹೇಳಿ ನಾವು ಕೀಳು ಎಂಬ ಕೀಳರಿಮೆ ಹಲವಾರು ಜನರಲ್ಲಿ ತುಂಬಿ ಕೊಂಡಿದೆ. ಅದನ್ನು ತೊಡೆದು ಹಾಕಲು ಧರ್ಮಗುರು ಬಸವಣ್ಣನವರು ಬಹಳ ಪ್ರಯತ್ನಪಟ್ಟರು. ವಿಭೂತಿಧಾರಕ ಶಿವ ಭಕ್ತರಾದ ಜನಾಂಗಗಳನ್ನೇ ಶೂದ್ರ / ಅಸ್ಪೃಶ್ಯ ವರ್ಗದಲ್ಲಿ ಸೇರಿಸಿರುವುದನ್ನು ಗಮನಿಸಿರಿ. ಮಹಿಷಾಸುರನಿಂದ ಹಿಡಿದು ಯಾವುದೇ ರಾಕ್ಷಸನ ಹಣೆಯ ಮೇಲೆ 3 ಎಳೆ ವಿಭೂತಿ ಇರುತ್ತದೆ. ಆರ್ಯರ ವರ್ಗೀಕರಣದಲ್ಲಿ ವಿಭೂತಿಧಾರಕರು ಶೂದ್ರ, ಅಸ್ಪೃಶ್ಯ(ದಸ್ಯು), ರಾಕ್ಷಸರು. ಇಂದಿಗೂ ಹಳ್ಳಿಗಳಲ್ಲಿ ನೋಡಿರಿ ಒಕ್ಕಲಿಗರು, ಮಡಿವಾಳರು, ಕುರುಬರು, ನಾಯಕರು ಎಲ್ಲರೂ 3 ಎಳೆ ವಿಭೂತಿ ಧರಿಸುತ್ತಾರೆ.

ಮಾಂಸಾಹಾರ ಜಾತಿ ಧರ್ಮವಲ್ಲ; ಹಿಂದೆ ಮಾನವ ಕೃಷಿಯನ್ನು ಕಲಿಯದಿದ್ದಾಗ ಪ್ರಾಣಿಗಳನ್ನು ಕೊಂದು ತಿನ್ನುತ್ತಿದ್ದ. ಕೃಷಿ ಬೆಳವಣಿಗೆಯಾದ ಮೇಲೆ ಸಸ್ಯಾಹಾರ ಪದ್ಧತಿ ಬಂದಿತು. ಭಾರತ ದೇಶದಲ್ಲಿ ಬುದ್ಧ, ಮಹಾವೀರ, ಗುರು ಬಸವಣ್ಣನವರಿಂದಾಗಿ ಅಹಿಂಸಾತ್ಮಕ ಜೀವನ ಪದ್ಧತಿ, ಆಹಾರ ವಿಧಾನ ಬಳಕೆಗೆ ಬಂದವು. ದೇವರು ನಿಸರ್ಗದಲ್ಲಿ ಪರ್ಯಾಯವಾಗಿ ಹಣ್ಣು-ಹಂಪಲು, ಗೆಡ್ಡೆ-ಗೆಣಸು, ಧಾನ್ಯ ಕೊಟ್ಟಿರುವಾಗ ಮತ್ತೊಂದು ಜೀವವನ್ನು ಬಲಿಕೊಡುವುದೇಕೆ? ನೀನು ಜೀವಿಸು, ಇತರ ಜೀವಿಯನ್ನು ಬದುಕಲು ಬಿಡು ಎಂಬ ಮಾನವೀಯ ಸಿದ್ಧಾಂತ ಯಾವುದೇ ಧರ್ಮ-ಜಾತಿಗೆ ಸೀಮಿತವಲ್ಲ, ಸೀಮಿತವಾಗಲೂ ಬಾರದು. ಸಸ್ಯಾಹಾರ ಸುಧಾರಿಸಿದ ಸುಸಂಸ್ಕೃತ ಮನಸ್ಸುಗಳ ಜೀವನ ವಿಧಾನ. ಹುಟ್ಟಿದ ಪ್ರತಿಯೊಬ್ಬ ಮಾನವನಿಗೂ ದೇವರ ಕೃಪೆಬೇಕು. ಅದನ್ನು ಪಡೆಯಲು ಇರುವ ಸಾಧನ ಪೂಜೆ - ಪ್ರಾರ್ಥನೆ-ಜಪ-ಧ್ಯಾನ ಇವೆಲ್ಲ ಮೇಲ್ಜಾತಿಯವರ ಸೊತ್ತಲ್ಲ, ಹಕ್ಕಲ್ಲ. ಅನ್ನ-ಅರಿವೆ-ಆಶ್ರಯ -ಔಷಧಿ-ಶಿಕ್ಷಣ ಮೂಲಭೂತ ಅವಶ್ಯಕತೆಯಾದಂತೆ ಅರಿವೂ ಸಹ ಮೂಲಭೂತ ಆವಶ್ಯಕತೆ. ಅಜ್ಞಾನಿಗಳಿಗಾಗಿ ನಿಮ್ಮ ಆದರ್ಶ ಬಲಿಗೊಡಬೇಡಿರಿ. ನಿಮ್ಮ ಹಿಂದಿನ ಜನ್ಮದ ಸಂಸ್ಕಾರ ಉತ್ತಮವಾಗಿದೆ. ಅದಕ್ಕಾಗಿ ನಿಮ್ಮಲ್ಲಿ ಅರಿವು ಮೂಡಿದೆ. ಅವರು ಇನ್ನೂ ಕ್ಯೂ ದಲ್ಲಿ ಬಹಳ ಹಿಂದಿದ್ದಾರೆ.

- ವಿನೋದಾ ಕೃಷ್ಣ ಮೂರ್ತಿ, ಬೆಂಗಳೂರು

? ಬೆಂಗಳೂರು ರಾಷ್ಟ್ರೀಯ ಬಸವ ದಳದ ಸಕ್ರಿಯ ಸದಸ್ಯರಾದ ಕೆಲವರಲ್ಲಿ ಒಂದು ದಿನ ಚರ್ಚೆ ನಡೆಯಿತು. ಗುರು ಬಸವಣ್ಣನವರಿಗೆ, ಅವರು ಸಂಸ್ಥಾಪಿಸಿದ ಲಿಂಗಾಯತ ಧರ್ಮಕ್ಕೆ ರಾಜಾಶ್ರಯ ಸಿಕ್ಕಿತು ಎಂದು ಕೆಲವರು, ಇಲ್ಲ ಎಂದು ನಾವು ವಾದಿಸಿದೆವು. ಯಾವುದು ಸರಿ?

★ ವಿಜಯ ನಗರದ ಅರಸ ಪ್ರೌಢದೇವರಾಯನವರೆಗೆ ಲಿಂಗಾಯತ ಧರ್ಮಕ್ಕೆ ಯಾವುದೇ ರಾಜಾಶ್ರಯ ಸಿಗಲಿಲ್ಲ. ಬಿಜ್ಜಳನಿಂದಲೂ ರಾಜಾಶ್ರಯ ಸಿಕ್ಕಿಲ್ಲ. ಆದರೆ ಆತನ ತಟಸ್ಥ ನೀತಿಯು ಪರೋಕ್ಷವಾಗಿ ಲಿಂಗಾಯತ ಧರ್ಮ ಹಬ್ಬಲು ನೆರವಾಯಿತು. ಅಶೋಕ ಚಕ್ರವರ್ತಿ ಬೌದ್ಧ ಧರ್ಮ ಸ್ವೀಕರಿಸಿ ನೇರವಾಗಿ ಮತ್ತು ಬಲವಾಗಿ ಬೌದ್ಧ ಧರ್ಮದ ಪ್ರಸಾರಕ್ಕೆ ಕಾರಣನಾದಂತೆ ಬಿಜ್ಜಳ ಕಾರಣನಾಗಲಿಲ್ಲ. ಧಾರ್ಮಿಕವಾಗಿ ಶೈವನಾಗಿದ್ದರೂ ಲಿಂಗಾಯತನಾಗಲೇ ಇಲ್ಲ. ವೈದಿಕರ ಹಿಡಿತದಲ್ಲಿ ಇದ್ದ ಆತ ಆಗಾಗ ಗುರು ಬಸವಣ್ಣನವರನ್ನು ಸಂದೇಹಿಸುತ್ತಿದ್ದ.

ಪರವಾದಿ ಬಿಜ್ಜಳ ಒರೆಗಲ್ಲಾಗಿ
ಶಿವಭಕ್ತಿಯ ಸಂಪಾದನೆಯ ಮಾಡುವಲ್ಲಿ
ಮೂವತ್ತಾರು ಕೊಂಡೆಯವ(ರ) ಪರಿಹರಿಸಿ

ಎಂದು ಚನ್ನಬಸವಣ್ಣನವರು ಹೇಳಿದ್ದಾರೆ. ಸ್ವತಃ ಧರ್ಮಪಿತರೇ "ಅಯ್ಯಾ... ಹಿಂದೆ ನಾನು ಮಾಡಿದ ಮೆರಹಿಂದೆ." ಎಂಬ ವಚನದಲ್ಲಿ, "ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು ಪರವಾದಿ ಬಿಜ್ಜಳನ ತಂದೊಡ್ಡಿ, ಎನ್ನನು ಅವನೊಡನೆ ಹೋರಿ" ಎಂದು ಹೇಳಿದ್ದಾರೆ. ಆದರಿಷ್ಟೆ, ವೈದಿಕರ ಚಾಡಿಯಿಂದ ಸಂದೇಹಿಸುತ್ತಿದ್ದ ಬಿಜ್ಜಳನು ಅವನ ಸಂದೇಹಗಳನ್ನು ಪರಿಹರಿಸುತ್ತಲೇ ಸಮಾಧಾನ ತಾಳುತ್ತಿದ್ದನಲ್ಲದೆ, ತಟಸ್ಥನಾಗುತ್ತಿದ್ದ, ಗುರು ಬಸವಣ್ಣನವರ ಅದ್ಭುತ ವ್ಯಕ್ತಿತ್ವದಿಂದ ಜನರು ಆಕರ್ಷಿತರಾಗಿ ಲಿಂಗಾಯತ ಧರ್ಮವು ಬೆಳೆಯಿತು. ಹೀಗಾಗಿ ಅದನ್ನು ನಾವು ರಾಜಾಶ್ರಯ ಎನ್ನಲು ಬರುವುದಿಲ್ಲ. ಹುಟ್ಟಿದಂದಿನಿಂದ ಇಂದಿನವರೆಗೂ ಜನ ಸಾಮಾನ್ಯರ ಆಶ್ರಯದಲ್ಲೇ ಬಸವ ಧರ್ಮ ಬೆಳೆದು ಬಂದಿದೆ, ಪೋಷಿಸಲ್ಪಟ್ಟಿದೆ. ಪ್ರೌಢದೇವರಾಯನ ಕಾಲದಲ್ಲಿ ಮಾತ್ರ ರಾಜಾಶ್ರಯ ದೊರೆತು ಕೆಲವು ಮಹತ್ವಪೂರ್ಣ ಕೃತಿಗಳು ರಚನೆಯಾದವು.

- ಚಂದ್ರಿಕಾ ಬಸವರಾಜು, ಶಿವಮೊಗ್ಗ

?ವ್ಯಕ್ತಿಯ ಜೀವನದಲ್ಲಿ ತಾಯಿ ತಂದೆ, ಪರಿಸರ, ಸಂಸ್ಕಾರ, ಹಿಂದಿನ ಜನ್ಮದ ಕರ್ಮ ಯಾವುದು ಮುಖ್ಯ ?

★ ಬೀಜದೊಳಗಣ ಸತ್ವ ಹೇಗೆ ಅತ್ಯಂತ ಮುಖ್ಯವೋ ಹಾಗೆ ವ್ಯಕ್ತಿಯ ಹಿಂದಿನ ಜನ್ಮದ ಕರ್ಮಫಲವೇ ಅವನ ಸ್ವಭಾವವನ್ನು ನಿರ್ಧರಿಸುತ್ತದೆ. ಅತ್ಯಂತ ಆದರ್ಶ, ಸಾತ್ವಿಕ ತಾಯಿತಂದೆಯರಲ್ಲಿ ಒಬ್ಬ ದುಷ್ಟನೂ, ಉಡಾಳನೂ ಆದ ಮಗ ಹುಟ್ಟಬಹುದು. ಅತ್ಯಂತ ಕೆಟ್ಟ ಪ್ರವೃತ್ತಿಯ ತಾಯಿತಂದೆಯರ ಹೊಟ್ಟೆಯಲ್ಲಿ ಒಂದು ಸಾತ್ವಿಕ ಜೀವ ಹುಟ್ಟಬಹುದು. ಪರಿಸರ, ಕುಟುಂಬ ಮುಂತಾದವು ಪೋಷಕ ಅಂಶಗಳು ಮಾತ್ರ. ಅವಿದ್ಯಾವಂತ ತಾಯಿತಂದೆಯರ ಮಕ್ಕಳು ಸಹ ಬುದ್ಧಿವಂತರು, ಪ್ರತಿಭಾವಂತರೂ ಆಗಿರುವುದನ್ನು ನಾವು ಕಾಣಬಹುದಾಗಿದೆ. ಹಿಂದಿನ ಜನ್ಮದಿಂದ ಬಂದ ಕರ್ಮದ ಗಂಟು ಬಹಳ ಮುಖ್ಯ !

ಕಲ್ಯಾಣ ಕಿರಣದ ಆಜೀವ ಸದಸ್ಯರಲ್ಲಿ ಹೃತ್ಪೂರ್ವಕ ವಿನಂತಿ

ಕಲ್ಯಾಣ ಕಿರಣವು 1970ರಲ್ಲಿ ಪ್ರಾರಂಭವಾದಾಗ ವಾರ್ಷಿಕ ಚಂದಾ 10 ರೂ, ಆಜೀವ ಸದಸ್ಯತ್ವ 100 ರೂ ಇದ್ದಿತು. 36 ವರ್ಷಗಳ ಕಾಲ ನಿರಂತರವಾಗಿ ಕಲ್ಯಾಣ ಕಿರಣವನ್ನು ಕಳಿಸುತ್ತಿರುವುದು ಯಾರಿಗಾದರೂ ಹಾಸ್ಯಾಸ್ಪದ ಎನ್ನಿಸುವುದು. ಆದರೆ ಇದನ್ನು ಜ್ಞಾನ ದಾಸೋಹದ ಒಂದು ಅಂಗವೆಂದು ನಾವು ಕಳಿಸುತ್ತಿದ್ದೇವಾದರೂ, ನಿರಂತರವಾಗಿ ಕಲ್ಯಾಣ ಕಿರಣವನ್ನು ಪಡೆಯುತ್ತಿರುವ ಆಜೀವ ಸದಸ್ಯರು ತಮ್ಮ ಕರ್ತವ್ಯದ ಬಗ್ಗೆ ಆಲೋಚಿಸಬೇಕು. ಈಗ ಆಜೀವ ಸದಸ್ಯತ್ವ 600 ರೂ ಇದೆ. ಆದ್ದರಿಂದ ತಾವು ಮೊದಲು ಕಟ್ಟಿದ್ದ ಹಣಕ್ಕಿಂತ ಹೆಚ್ಚಿನ ಹಣವನ್ನು ಕಲ್ಯಾಣ ಕಿರಣದ ಆಜೀವ ಸದಸ್ಯತ್ವಕ್ಕೆ ಕಟ್ಟಬೇಕೆಂದು ವಿನಂತಿಸುತ್ತೇವೆ.


ಬೆಂಗಳೂರಿನಿಂದ ಪೂನಾಕ್ಕೆ ವಾಸ್ತವ್ಯ ಬದಲಾಯಿಸಿರುವ ಉದಾರ ದಾನಿಗಳಾದ ಡಾ||ವಿ.ಸುಶೀಲಮ್ಮನವರು ಮೊದಲು ಆಜೀವ ಸದಸ್ಯರಾಗಿದ್ದರೂ ಸಹ ಪುನಃ 600 ರೂಗಳನ್ನು ಕಲ್ಯಾಣ ಕಿರಣಕ್ಕೆ ಕಟ್ಟಿ ಅನುಕರಣೀಯ ಆದರ್ಶವನ್ನು ಮೆರೆದಿದ್ದಾರೆ. ಅದೇ ರೀತಿ ಇನ್ನಿತರ ಆಜೀವ ಸದಸ್ಯರು ಸಹ ಸಹಕರಿಸಬೇಕೆಂದು ಕೋರುತ್ತೇವೆ.

- ಸಂಪಾದಕರು, ಕಲ್ಯಾಣ ಕಿರಣ

ವಿಸ್ತಾರಗೊಂಡ

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ



ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ. ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು - ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ

"ಬಸವ ಗಂಗೋತ್ರಿ" ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ "ಆರೋವಿಲ್ಲೆ" ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿ ದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಗೆ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. ""ಬಸವ ಗಂಗೋತ್ರಿ ನಗರ" 2ನೆಯ ಹಂತದ ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಒಡೆತನದಲ್ಲಿ ರೂಪುಗೊಂಡಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ' - 40' X 60' - ವಿಸ್ತೀರ್ಣ 2400 ಚ.ಅಡಿಗಳು
ವರ್ಗ 'ಬಿ' - 40' X 40' - ವಿಸ್ತೀರ್ಣ 1600 ಚ.ಅಡಿಗಳು
ವರ್ಗ 'ಸಿ' - 30' X 40' - ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ವಿರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

1. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ

ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 2000-00 (ಎರಡು ಸಾವಿರ)ರೂಪಾಯಿ ಕಟ್ಟಲು ಪರವಾನಾಗಿ ನೀಡಲಾಗುವುದು.

3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬೆಂಗಳೂರು" ಹೆಸರಿಗೆ 250-00(ಎರಡು ನೂರಾ ಐವತ್ತು) ರೂಗಳನ್ನು ಎಂ.ಓ / ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. 2ನೆಯ ಹಂತದ ನಿವೇಶನ ವಿತರಣಾ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ : ದೂ : 080 - 23325335 / 23322790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು,
ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬಸವ ಮಂಟಪ
2035, 20ನೆಯ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560010

ಬಸವ ಗಂಗೋತ್ರಿ ವಿಶೇಷ ವಿವರಗಳು

★ ಬೆಂಗಳೂರು - ಮೈಸೂರು ನಗರಗಳ ಚತುಷ್ಪಥ ಹೆದ್ದಾರಿಗೆ ಹೊಂದಿಕೊಂಡಿದೆ.

★ ರಾಜರಾಜೇಶ್ವರಿ ಡೆಂಟಲ್ ಕಾಲೇಜು, ಡಾನ್ ಬಾಸ್ಕೋ ಎಂಜಿನಿಯರಿಂಗ್ ಕಾಲೇಜ್ ಮುಂತಾದ ಸಂಸ್ಥೆಗಳ ಸಮೀಪದಲ್ಲಿದೆ.

★ ಬೆಂಗಳೂರು ನಗರದಿಂದ ಸಾರಿಗೆ ವ್ಯವಸ್ಥೆಯ ಅನುಕೂಲವಿದೆ. ಹೀಗಾಗಿ ನಗರದಲ್ಲಿ ಉದ್ಯೋಗಿಗಳಾಗಿರುವವರಿಗೆ ಹೋಗಿ ಬರಲು ಅನುಕೂಲತೆ ಇದೆ.

★ ಮೊದಲನೆಯ ಹಂತದಲ್ಲಿ ರೂಪಿಸಿದ ನಿವೇಶನಗಳು ಮಾರಾಟವಾಗಿದ್ದು ಜನರ ಬೇಡಿಕೆ ಬಹಳವಾಗಿರುವುದರಿಂದ ಎರಡನೆಯ ಹಂತದ ಯೋಜನೆ ಪ್ರಾರಂಭಿಸಲಾಗಿದೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ


ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್(ರಿ.) ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು - ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 21 ಕಿ.ಮೀ.ಬಳಿ ಇದ್ದು, ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು 231, 227, 228, 229, 226ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ಪ್ರವೇಶ ದ್ವಾರವಿದೆ.



ವಚನ ಸಾಹಿತ್ಯವನ್ನು ಕುದುರೆಗಳ ಮೇಲೆ ಗಂಟುಕಟ್ಟಿ ಇಟ್ಟುಕೊಂಡು ಮಡಿವಾಳ ಮಾಚಿದೇವರ ನೇತೃತ್ವದಲ್ಲಿ ಶರಣರು ಕಲ್ಯಾಣವನ್ನು ತೊರೆಯುತ್ತಿರುವ ದೃಶ್ಯ.

CPMG/BGW-5017-2006-2008 Regd No.19980/70



ಹುತಾತ್ಮ ಶರಣರಾದ ಹರಳಯ್ಯ – ಮಧುವರಸ– ಶೀಲವಂತರಿಗೆ ಎಳೆಹೂಟೆ ಶಿಕ್ಷೆ